# ಬಿ. ಶಿವಮೂರ್ತಿಶಾಸ್ತ್ರಿಗಳು

## ಕನ್ನಡ ಪ್ರಜ್ಞೆಯನ್ನು ವಿಶ್ವ ಪ್ರಜ್ಞೆಯಾಗಿಸುವತ್ತ

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಕರ್ನಾಟಕದ ಏಕೀಕರಣ ಒಂದು ಐತಿಹಾಸಿಕವೂ ಮತ್ತು ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತೊಂದು ಮಹತ್ವದ ಐತಿಹಾಸಿಕ ಘಟನೆ. ಕರ್ನಾಟಕದ ಇತರೆ ವಿಶ್ವವಿದ್ಯಾಲಯಗಳು ಕೇವಲ ಕೆಲವು ಜಿಲ್ಲೆಗಳಿಗೆ ಮಾತ್ರ ಪರಿಮಿತಗೊಂಡಿದ್ದರೆ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಅಖಂಡ ಕರ್ನಾಟಕ ಮಾತ್ರವಲ್ಲದೆ ಕನ್ನಡಿಗ ಮತ್ತು ಕನ್ನಡ ಸಂಸ್ಕೃತಿ ನೆಲೆಸಿರುವ ಎಲ್ಲ ದೇಶ ಮತ್ತು ವಿದೇಶಗಳನ್ನೂ ಒಳಗೊಂಡಿದೆ. ಈ ಕಾರಣದಿಂದ ನಮ್ಮ ವಿಶ್ವವಿದ್ಯಾಲಯದ ದಾರಿ ಮತ್ತು ಗುರಿ ಎರಡೂ ವಿಭಿನ್ನವೂ ಮತ್ತು ವೈಶಿಷ್ಟ್ಯಪೂರ್ಣವೂ ಆಗಿವೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಜನಜೀವನದ ಸರ್ವಮುಖಗಳ ವಿಶಿಷ್ಟವಾದ ಅಂತರಂಗ ಮತ್ತು ಬಹಿರಂಗ ಸಂಪತ್ತನ್ನು ಕುರಿತು ಅಧ್ಯಯನ ಮಾಡುವ, ಸಂಶೋಧಿಸುವ ಮತ್ತು ಅದರ ಅಧ್ಯಯನದ ಫಲಿತಗಳನ್ನು ಜಗತ್ತಿನಾದ್ಯಂತ ಪ್ರಸಾರ ಮಾಡಿ ಕರ್ನಾಟಕದ ಬಗೆಗಿನ ಅರಿವನ್ನು ಜನಸಮುದಾಯದಲ್ಲಿ ವಿಸ್ತರಿಸುವ ಹಾಗೂ ಅನಂತಮುಖಿಯಾದ ವಿಶ್ವಜ್ಞಾನವನ್ನು ಕನ್ನಡ ಜ್ಞಾನವನ್ನಾಗಿ ಪರಿವರ್ತಿಸಿ ಅದು ಕನ್ನಡಿಗರೆಲ್ಲರಿಗೆ ದಕ್ಕುವಂತೆ ಮಾಡುವ ಮೂಲಭೂತ ಆಶಯದ ಪ್ರತಿನಿಧಿಯಾಗಿ ಸ್ಥಾಪಿತಗೊಂಡಿದೆ. ಬೋಧನೆಗಿಂತ ಸಂಶೋಧನೆ, ಸೃಷ್ಟಿಗಿಂತ ವಿಶ್ವಂಭರ ದೃಷ್ಟಿ, ಶಿಥಿಲ ವಿವರಣೆಗಿಂತ ಅತುಳ ಸಾಧ್ಯತೆಗಳನ್ನೊಳಗೊಂಡ ಅನನ್ಯ ಅಭಿವ್ಯಕ್ತಿ. ನಾಡಿನ ಕೋಟಿ ಕೋಟಿ ಶ್ರೀಸಾಮಾನ್ಯರ ವಿವಿಧ ಪ್ರತಿಭಾಶಕ್ತಿ ಮತ್ತು ಸಾಮರ್ಥ್ಯಗಳ ಸದ್ಬಳಕೆಯ ಮೂಲಕ ಅವರ ಅಂತಃಪ್ರಜ್ಞೆಯನ್ನು ಎಚ್ಚರಿಸುವ, ವಿಕಸಿಸುವ ಶ್ರದ್ಧಾನ್ವಿತ ಕಾಯಕ ಇದರ ದಾರಿಯಾಗಿದೆ.

ಕನ್ನಡ ನಾಡನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಡು, ಕನ್ನಡ ವಿಶ್ವವಿದ್ಯಾಲಯವನ್ನು ನೋಡಿದಲ್ಲದೆ ಕನ್ನಡ ನಾಡಿನ ಯಾತ್ರೆ ಸಂಪೂರ್ಣವಾಗದು, ಸಾರ್ಥಕವಾಗದು ಎಂಬಂತೆ ರೂಪುಗೊಳ್ಳುತ್ತಿರುವ ಮತ್ತು ರೂಪುಗೊಳ್ಳಬೇಕಾದ ಮಹಾಸಂಸ್ಥೆ ಇದು. ಕನ್ನಡಪ್ರಜ್ಞೆ ತನ್ನ ಸತ್ವ ಮತ್ತು ಸ್ವತ್ವದೊಡನೆ ವಿಶ್ವಪ್ರಜ್ಞೆಯಾಗಿ ಅರಳಿ ನಳನಳಿಸಬೇಕು; ವಿಶ್ವಪ್ರಜ್ಞೆ ಕನ್ನಡ ದೇಶೀ ಪ್ರಜ್ಞೆಯೊಳಗೆ ಪ್ರವೇಶಿಸಿ, ಪ್ರವಹಿಸಿ ಸಮನ್ವಯಗೊಂಡು, ಸಂಲಗ್ನಗೊಂಡು, ಸಮರಸಗೊಂಡು ಸಾಕ್ಷಾತ್ಕಾರಗೊಳ್ಳಬೇಕು ಎಂಬುದೇ ಇದರ ಗುರಿ. ಈ ಗುರಿಯ ಮೂಲಕ ಕನ್ನಡ ಕರ್ನಾಟಕತ್ವದ ಉಸಿರಾಗಿ, ವಿಶ್ವಪ್ರಜ್ಞೆಯ ಹಸಿರಾಗಿ, ಕನ್ನಡಮಾನವ ವಿಶ್ವಮಾನವನಾಗಿ ಬೆಳೆಯಲು ಸಾಧನವಾಗಬೇಕು ಕನ್ನಡಿಗರೆಲ್ಲರ ಸಾಮೂಹಿಕ ಶ್ರಮ ಮತ್ತು ಪ್ರತಿಭೆಗಳ ಸಮಷ್ಟಿ ಪ್ರತಿಕ್ರಿಯೆಯಿಂದ ಬೆಳಕಿನ ಈ ಮಹಾಪಥವನ್ನು ಕ್ರಮಿಸುವುದು ನಮ್ಮ ವಿಶ್ವವಿದ್ಯಾಲಯದ ಮಹತ್ತರ ಆಶಯ.

ನಾಗಾಲೋಟದಿಂದ ಕ್ರಮಿಸುತ್ತಿರುವ ಜಗತ್ತಿನ ವ್ಯಾಪಕ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಶೋಧನೆ ಮತ್ತು ಚಿಂತನೆಗಳನ್ನು ಕನ್ನಡದಲ್ಲಿ ಸತ್ವಪೂರ್ಣವಾಗಿ ದಾಖಲಿಸಿ ಕನ್ನಡ ಓದುಗರ ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ವಿಶೇಷ ಹೊಣೆಯನ್ನು ಹೊತ್ತು ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗ ಅಸ್ತಿತ್ವಕ್ಕೆ ಬಂದಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮತ್ತು ವಿತರಣಾ ಪ್ರಕ್ರಿಯೆಗಳ ಮೂಲಕ ಇದು ಈ ಗುರಿಯನ್ನು ತಲುಪಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಈಗಾಗಲೇ ೬೦೦ಕ್ಕೂ ಹೆಚ್ಚು ವೈವಿಧ್ಯಮಯ ಮತ್ತು ವೈಶಿಷ್ಟ್ಯಮಯ ಕೃತಿಗಳ ಮೂಲಕ ಕನ್ನಡ ಗ್ರಂಥಲೋಕದ ಅಂತರಂಗ ಮತ್ತು ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸಿರುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ.

ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಮಹತ್ವದ ಲೇಖಕರನ್ನು, ಕಲಾವಿದರನ್ನು, ವಿಜ್ಞಾನಿಗಳನ್ನು ಹಾಗೂ ಸಾಹಿತ್ಯ ಮತ್ತು ಸಾಹಿತ್ಯೇತರವಾದ ಪ್ರಮುಖ ವಿಷಯಗಳನ್ನು ಕುರಿತು ಸಾಮಾನ್ಯ ಜನರಿಗೆ ತಿಳುವಳಿಕೆ ನೀಡಲು ಪ್ರಸಾರೋಪನ್ಯಾಸಗಳನ್ನು

ಮಾಡಿಸುವ ಯೋಜನೆಯನ್ನು ರೂಪಿಸಿಕೊಂಡು ಅದರಂತೆ ಕಾರ್ಯನಿರ್ವಹಿಸುತ್ತಿದೆ. ಅತ್ಯಂತ ಸರಳವಾಗಿ ಈ ವಿಷಯಗಳನ್ನು ಕುರಿತು ಪರಿಚಯ ಮಾಡಿಕೊಡುವ ಈ ಉಪನ್ಯಾಸಗಳನ್ನು ಪುಸ್ತಕಗಳ ಮೂಲಕವಾಗಿ ಪ್ರಕಟಿಸುತ್ತಿದೆ. ಈ ಉಪನ್ಯಾಸ ಮಾಲೆ ಮತ್ತು ಅದರ ಉತ್ಪನ್ನಗಳಾದ ಈ ಚಿಕ್ಕ ಹೊತ್ತಿಗೆಗಳು ತುಂಬ ಜನಪ್ರಿಯವಾಗಿವೆ. ಈ ಮಾಲೆಯಲ್ಲಿ ಪ್ರಸ್ತುತ ಪುಸ್ತಕ ಪ್ರಕಟವಾಗುತ್ತಿದೆ.

'ಬಿ. ಶಿವಮೂರ್ತಿಶಾಸ್ತ್ರಿಗಳು' ಎಂಬ ಕಿರುಹೊತ್ತಿಗೆಯನ್ನು ಈ ಮಾಲೆಗಾಗಿ ಬರೆದುಕೊಟ್ಟಿರುವ ಪ್ರೊ. ಎನ್. ಬಸವಾರಾಧ್ಯ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

**ಡಾ. ಎಚ್.ಜೆ. ಲಕ್ಕಪ್ಪಗೌಡ**
ಕುಲಪತಿಗಳು

# ಬಿ. ಶಿವಮೂರ್ತಿಶಾಸ್ತ್ರಿಗಳು (೧)

## ೧. ಹಿನ್ನೆಲೆ

ಭರತಖಂಡಕ್ಕೆ ಭೂಷಣಪ್ರಾಯವಾದ ಕರ್ನಾಟಕದ ಸಾಹಿತ್ಯಕ ಮತ್ತು ಧಾರ್ಮಿಕ ಇತಿಹಾಸದಲ್ಲಿ ಪ್ರಮುಖವಾದ ಪುಣ್ಯಪ್ರದೇಶ ತುಮಕೂರು ಜಿಲ್ಲೆ. ವಿಶ್ವಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆಯನ್ನಿತ್ತ ಕನ್ನಡ ವಚನ ವಾಙ್ಞಯದ ಸಂಕಲನ, ಪ್ರಸರಣ, ರಚನಾಕಾರ್ಯಗಳನ್ನು ಕೈಕೊಂಡ ಪುಣ್ಯಪುರುಷರ ಜನ್ಮ ಭೂಮಿಯಾಗಿದೆ. ಭಗವಾನ್ ಎಡೆಯೂರು ಸಿದ್ಧ ಲಿಂಗೇಶ್ವರ, ಧೀಮಂತ ಕವಿಗಳಾದ ಗುಬ್ಬಿಯ ಮಲ್ಲಣ್ಣ, ಮಲ್ಲಣಾರ್ಯ, ಶಾಂತೇಶ ಪ್ರಖ್ಯಾತ ವಚನಸಂಕಲನಕಾರರಾದ ಗೂಳೂರು ಸಿದ್ಧವೀರಣ್ಣ. ಶ್ರೇಷ್ಠಕವಿಗಳಾದ ಸಂಪಾದನೆಯ ಪರ್ವತೇಶ. ವಿರಕ್ತ ತೋಂಟದಾರ್ಯ, ಬಿಜ್ಜಾವರದ ಚಿಕ್ಕಭೂಪಾಲ - ಇವರೇ ಮೊದಲಾದ ಅಸಂಖ್ಯಾತ ಮಹಾತ್ಮರ ಆಡುಂಬೊಲವೂ ಆಗಿದೆ. ಈ ಪುಣ್ಯಪುರುಷರ ಪಾದಸ್ಪರ್ಶದಿಂದ ಈ ನಾಡು ಪವಿತ್ರವಾಗಿದೆ, ಪಾವನವಾಗಿದೆ.

ತುಮಕೂರು ಜಿಲ್ಲೆಯ ಸಿದ್ಧಗಂಗೆ, ಶಿವಗಂಗೆ, ಗುಬ್ಬಿ, ಗೂಳೂರು, ಕುಪ್ಪೂರು ಗದ್ದಿಗೆ, ಸಿದ್ಧರಬೆಟ್ಟ, ನೊಣವಿನಕೆರೆ, ಕಗ್ಗೆರೆ, ಎಡೆಯೂರು, ಎಳನಡು, ಗೋಡೆಕೆರೆ ಮೊದಲಾದುವು ಸುಕ್ಷೇತ್ರಗಳೆನಿಸಿವೆ. ಇವುಗಳಿಗೆಲ್ಲ ಸ್ಥಲಪುರಾಣಗಳಿವೆ. ದೇವರಾಯನದುರ್ಗ, ಬಿಜ್ಜಾವರ, ಮಿಡಿಗೇಸಿ, ಪಾವಗಡ, ಹಾಗಲವಾಡಿ ಇವೇ ಮುಂತಾದ ಐತಿಹಾಸಿಕ ಸ್ಥಳಗಳಿವೆ. ಹದಿನೈದು ಮತ್ತು ಹದಿನಾರನೆಯ ಶತಮಾನಗಳಲ್ಲಿ ಎರಡು ಲಿಂಗವಂತ ಅರಸುಮನೆತನಗಳು ಇಲ್ಲಿ ಬಾಳಿಬೆಳಗಿವೆ.

ಕರ್ನಾಟಕದ ಇತಿಹಾಸದಲ್ಲಿ ತುಮಕೂರು ತುಂಬ ಪ್ರಾಮುಖ್ಯವನ್ನು ಪಡೆದಿದೆ. 'ಕಲ್ಪವೃಕ್ಷಗಳ ನೆಲೆವೀಡು' ಎಂಬ ಖ್ಯಾತಿಯನ್ನು ಗಳಿಸಿರುವ ಈ ನಾಡು ಪ್ರಾಕೃತಿಕ ಸೌಂದರ್ಯದಿಂದ ಧಾರ್ಮಿಕ ಮಠಮಾನ್ಯಗಳಿಂದ ಪ್ರಾಚೀನ ಅರ್ವಾಚೀನ ಕವಿಶ್ರೇಷ್ಠರಿಂದ ಪರಿಶೋಭಿಸುತ್ತಿದೆ. ಅರ್ವಾಚೀನ ಪ್ರಾತಃಸ್ಮರಣೀಯ ಕನ್ನಡಿಗರಲ್ಲಿ ಅಗ್ರಗಣ್ಯರೂ ನವೋದಯ ಸಾಹಿತ್ಯದ ಆಚಾರ್ಯರೂ ಕನ್ನಡದ ಕಣ್ವರೂ, ಯುಗಪ್ರವರ್ತಕರೂ ಎನಿಸಿದ ರಾಜಸೇವಾಸಕ್ತ ಬಿ.ಎಂ. ಶ್ರೀಕಂಠಯ್ಯ, ಪ್ರಕಾಂಡ ಪಂಡಿತರಾದ ಡಾ. ಡಿ.ಎಲ್. ನರಸಿಂಹಾಚಾರ್, ಪ್ರೊ. ತೀ.ನಂ. ಶ್ರೀಕಂಠಯ್ಯ, ಕ.ವೆಂ. ರಾಘವಾಚಾರ್, ಕೆ. ವೆಂಕಟರಾಮಪ್ಪ, ಹೊಸಕೆರೆ ಚಿದಂಬರಯ್ಯ, ನಂಜುಂಡ ಶಿವಯೋಗಿ, ಬೆಳ್ಳಾವೆ ವೆಂಕಟನಾರಾಯಣಪ್ಪ, ನಿಟ್ಟೂರು ಶ್ರೀನಿವಾಸರಾವ್ - ಇವರೇ ಮೊದಲಾದ ವಿದ್ವನ್ಮಣಿಗಳ ಜನ್ಮಭೂಮಿ ತುಮಕೂರು ಜಿಲ್ಲೆ. ಈ ಪರಂಪರೆಯ ಪ್ರತಿನಿಧಿಯೋ ಎಂಬಂತೆ ಶಿವಮೂರ್ತಿಶಾಸ್ತ್ರಿಗಳು ಬಾಳಿ ಬೆಳಗಿದ್ದಾರೆ.

ಕನ್ನಡ ಸಾಹಿತ್ಯ ಸಂಸ್ಕೃತಿ ಇತಿಹಾಸ ಧರ್ಮ ಮೊದಲಾದ ಕ್ಷೇತ್ರಗಳಿಗೆ ಗಣನೀಯವಾದ ಸೇವೆಯನ್ನು ಸಲ್ಲಿಸಿದವರಲ್ಲಿ ಶಿವಮೂರ್ತಿ ಶಾಸ್ತ್ರಿಗಳು ಅಗ್ರಗಣ್ಯರು. ಸಾಮಾಜಿಕ, ರಾಜಕೀಯ, ಧಾರ್ಮಿಕ, ಪತ್ರಿಕಾರಂಗಗಳಿಗೂ ಶ್ರೀಯುತರ ಸೇವೆ ಅಪರಿಮಿತ. ಕರ್ಣಾಟಕ

ಏಕೀಕರಣ, ಭಾರತದ ಸ್ವಾತಂತ್ರ್ಯ ಸಂಗ್ರಾಮ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಅದರಲ್ಲೂ ವಿಶೇಷವಾಗಿ ವೀರಶೈವ ಸಾಹಿತ್ಯಕ್ಕೆ ಮೌಲಿಕ ಕೊಡುಗೆಯನ್ನು ನೀಡಿದ್ದಾರೆ. ದೈವದತ್ತವಾಗಿ ಪ್ರಾಪ್ತವಾಗಿದ್ದ ಕೀರ್ತನ ಕಲೆಯಿಂದ ಅಖಂಡ ಕರ್ನಾಟಕವನ್ನು ಹಲವಾರು ಸಲ ಸುತ್ತಿ ಧಾರ್ಮಿಕ ಜಾಗೃತಿಯನ್ನುಂಟುಮಾಡಿದ್ದಾರೆ. ಶಾಸ್ತ್ರಿಗಳು ಸಂಚರಿಸದ ಊರುಗಳಿಲ್ಲ. ಸಂದರ್ಶಿಸದ ಮಠಮಾನ್ಯಗಳಿಲ್ಲ. ಇಂತಹ ಮಹಾಮೇಧಾವಿ ಶಿವಮೂರ್ತಿ ಶಾಸ್ತ್ರಿಗಳ ಸಮಗ್ರ ಜೀವನದ ಒಂದು ಕಿರುಪರಿಚಯವನ್ನು ಮಾಡಿಕೊಡಲಾಗಿದೆ.

**೧. ಜನನ – ಬಾಲ್ಯ – ವಿದ್ಯಾಭ್ಯಾಸ**

ತುಮಕೂರಿನಲ್ಲಿ ಹುಲುಕುಂಟೆ ಮಠದ ಬಸವಯ್ಯಸ್ವಾಮಿ ಎಂಬ ಜಂಗಮರಿದ್ದರು. ಇವರ ಹೆಂಡತಿ ನೀಲಮ್ಮ. ಪುರಾಣ ಪ್ರವಚನ ಮಾಡುವುದು ಇವರ ಕಾಯಕವಾಗಿತ್ತು. ಈ ದಂಪತಿಗಳಿಗೆ ಗಂಗಮ್ಮ ಎಂಬ ಒಬ್ಬ ಹೆಣ್ಣು ಮಗಳಿದ್ದಳು. ಆಮೇಲೆ ಶುಭಕೃತುನಾಮ ಸಂವತ್ಸರದ ಮಾರ್ಗಶಿರ ಬಹುಳ ಏಕಾದಶಿ ಸೋಮವಾರ ಎಂದರೆ ದಿನಾಂಕ ೧೩ - ೧ - ೧೯೦೩ ರಂದು ಒಬ್ಬ ಪುತ್ರ ರತ್ನ ಜನಿಸಿದನು. ಆ ಬಾಲಕನಿಗೆ ಕುಪ್ಪಯ್ಯ ಎಂದು ನಾಮಕರಣ ಮಾಡಿದರು. ಪೌರಾಣಿಕ ವಂಶದವರಾದ ಬಸವಯ್ಯಸ್ವಾಮಿಗಳು ಚೆನ್ನಬಸವ ಪುರಾಣ, ಬಸವಪುರಾಣ, ಜೈಮಿನಿಭಾರತ, ರಾಜಶೇಖರ ವಿಲಾಸ ಮೊದಲಾದ ಕಾವ್ಯಗಳನ್ನು ಸುಶ್ರಾವ್ಯವಾಗಿ ವಾಚನ ಮಾಡುತ್ತಿದ್ದರು. ಇದು ತಮ್ಮ ಮಗನ ಮನಸ್ಸಿನ ಮೇಲೆ ತುಂಬ ಪರಿಣಾಮವನ್ನು ಬೀರಿತು. ವಂಶಪಾರಂಪರ್ಯವಾಗಿ ನಡೆದುಕೊಂಡು ಬಂದಿದ್ದ ಈ ಕೀರ್ತನ ಕಲೆಯನ್ನು ಶಾಸ್ತ್ರಿಗಳು ತುಂಬ ಸಮರ್ಥವಾಗಿ ರೂಢಿಸಿಕೊಂಡರು.

ಶಾಸ್ತ್ರಿಗಳು ಬಾಲ್ಯ ವಿದ್ಯಾಭ್ಯಾಸವು ತುಮಕೂರಿನ ವೆಸ್ಲಿಯನ್ ಮಿಷನ್ ಸ್ಕೂಲಿನಲ್ಲಿ ನಡೆಯಿತು. ೧೯೧೭ರಲ್ಲಿ ಕನ್ನಡ ಮುಲ್ಕಿ ಪರೀಕ್ಷೆಯಲ್ಲಿ ಶಾಸ್ತ್ರಿಗಳು ಉತ್ತೀರ್ಣರಾದರು. ಪ್ರೌಢಶಾಲೆಯಲ್ಲಿ ವ್ಯಾಸಂಗವನ್ನು ಮುಂದುವರಿಸುವುದಕ್ಕೆ ಶಾಸ್ತ್ರಿಗಳ ತಂದೆಯವರು ಅನುಮತಿ ನೀಡಲಿಲ್ಲ. ಆ ಪ್ರಸಂಗವನ್ನು ಶಾಸ್ತ್ರಿಗಳೇ ಈ ರೀತಿ ಹೇಳಿಕೊಂಡಿದ್ದಾರೆ. "ಹೈಸ್ಕೂಲಿಗೆ ಹೋಗಬೇಕೆಂದಿದ್ದಾಗ ನಮ್ಮ ತಂದೆಯವರು ಪೂರ್ವಕಾಲದ ಪೌರಾಣಿಕರಾಗಿದ್ದುದರಿಂದಲೂ ನನ್ನನ್ನು ಒಬ್ಬ ಜಂಗಮಯ್ಯನನ್ನಾಗಿ ಮಾಡಬೇಕೆಂದಿದ್ದುದರಿಂದಲೂ ನನ್ನ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡಲಿಲ್ಲ. ನಾನು ಹಟ ಮಾಡಿದಾಗ, ಅವರು ನನ್ನನ್ನು ಚೆನ್ನಾಗಿ ಥಳಿಸಿ ಶಾಲೆ ಬಿಡಿಸಿದರು. ಅದರ ಗುರುತು ಈಗಲೂ ಮೈಮೇಲೆ ಇದೆ." (ದೇವಗಂಗೆ, ಭಾಗ - ೧, ಪುಟ. ೧)

ಹೈಸ್ಕೂಲು ವ್ಯಾಸಂಗಕ್ಕೆ ಅವಕಾಶವಿಲ್ಲವಾದುದರಿಂದ ನಿರಾಶರಾದ ಶಾಸ್ತ್ರಿಗಳು ಉಪಾಯವಿಲ್ಲದೆ ತುಮಕೂರಿನಲ್ಲೇ ಇದ್ದ ನಾರ್ಮಲ್ ಸ್ಕೂಲಿಗೆ ಸೇರಿಕೊಂಡರು. ಅಪ್ಪರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಈ ಮಧ್ಯೆ ಶಾಸ್ತ್ರಿಗಳ ಹೈಸ್ಕೂಲು ವಿದ್ಯಾಭ್ಯಾಸಕ್ಕೆ ಅಡ್ಡಿಪಡಿಸಿದ್ದ ಅವರ ತಂದೆಯವರು ೧೯೧೮ರಲ್ಲಿ ಶಿವಾಧೀನರಾದರು. ಸಂಸಾರ ನಿರ್ವಹಣೆಯ ಭಾರವೆಲ್ಲ ಶಾಸ್ತ್ರಿಗಳ ಮೇಲೆಯೇ ಬಿದ್ದಿತು. ಇದೇ ಸಮಯದಲ್ಲಿ ಶಾಸ್ತ್ರಿಗಳ ಅಕ್ಕ ಶರಣೆ ಗಂಗಮ್ಮ ಅಕಾಲ ಮೃತ್ಯುವಿಗೆ ಈಡಾದರು. ಮೊದಲೇ ತುಂಬ ಬಡತನದ ಕುಟುಂಬ. ಅದರ ಮೇಲೆ ಈ ಎರಡು ಅನಿರೀಕ್ಷಿತ ಸಾವುಗಳಿಂದ ಶಾಸ್ತ್ರಿಗಳು ಕಂಗಾಲಾದರು.

**೨. ಉಪಾಧ್ಯಾಯ ವೃತ್ತಿ**

ಜೀವನೋಪಾಯಕ್ಕಾಗಿ ಶಾಸ್ತ್ರಿಗಳು ಗುಬ್ಬಿಯ ಮಾಧ್ಯಮಿಕ ಶಾಲೆಯಲ್ಲಿ ಕನ್ನಡದ ಉಪಾಧ್ಯಾಯರಾಗಿ ಕೆಲಸಕ್ಕೆ ಸೇರಿಕೊಂಡರು. ಸುಮಾರು ಎರಡು ವರ್ಷಗಳ ಕಾಲ (೧೯೨೪ - ೨೫) ಗುಬ್ಬಿಯ ಚನ್ನಬಸವೇಶ್ವರ ದೇವಾಲಯದ ಬಳಿಯ ಕದಂಬನದಿಯ ತೀರದಲ್ಲಿದ್ದ ಅಡವಿಸ್ವಾಮಿಗಳ ಮಠದಲ್ಲಿ ವಾಸಮಾಡುತ್ತಿದ್ದರು. ಶ್ರೀಮಠದಲ್ಲಿದ್ದ ಪ್ರಾಚೀನ ಕಾವ್ಯಗಳನ್ನೂ, ಪುರಾಣಗಳನ್ನೂ ಚೆನ್ನಾಗಿ ವ್ಯಾಸಂಗ ಮಾಡಿದರು. ಗುಬ್ಬಿಯ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದಾಗ ಅಲ್ಲಿಗೆ ಬಂದಿದ್ದ ರೆವೆರೆಂಡ್ ಬ್ಲೈನ್ ಎಂಬ ಪಾದ್ರಿಗೆ ಕನ್ನಡವನ್ನು ಬೋಧಿಸುತ್ತಿದ್ದರು. ಶಾಸ್ತ್ರಿಗಳು ಉಪಾಧ್ಯಾಯರಾಗುವ ವೇಳೆಗೆ ಗುಬ್ಬಿಯ ಒಂದು ಬಡಕುಟುಂಬದಲ್ಲಿ ೧೯೨೪ರಲ್ಲಿ ವಿವಾಹವೂ ಆಗಿತ್ತು.

ಸಿದ್ಧಗಂಗಾ ಕ್ಷೇತ್ರದಲ್ಲಿ ಪ್ರೊ. ಬಸವನಾಳರ ಅಧ್ಯಕ್ಷತೆಯಲ್ಲಿ ಒಂದು ಧಾರ್ಮಿಕಸಭೆ ೧೯೨೬ರಲ್ಲಿ ನಡೆಯಿತು. ಆ ಸಭೆಯಲ್ಲಿ ಶಿವಮೂರ್ತಿಶಾಸ್ತ್ರಿಗಳು ಸ್ವಯಂ ರಚಿತ ಒಂದು ಕವಿತೆಯನ್ನು ಹಾಡಿದ್ದೇ ಅಲ್ಲದೆ ಷಡಕ್ಷರದೇವನನ್ನು ಕುರಿತು ಉಪನ್ಯಾಸವನ್ನೂ ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರೊ. ಬಸವನಾಳರಿಗೆ ಶಾಸ್ತ್ರಿಗಳ ಉಪನ್ಯಾಸ ತುಂಬ ಮೆಚ್ಚುಗೆಯಾಯಿತು. ಆ ಸಭೆಯಲ್ಲಿ ಮಾಗಡಿ ವೀರಪ್ಪಶಾಸ್ತ್ರಿಗಳು ಬೊಂಬಾಯಿಯ ಸುಪ್ರಸಿದ್ಧ ವ್ಯಾಪಾರಿಗಳಾದ ಗಂಗಾಧರಪ್ಪ ಸಾಮೋಜಿ, ಹುಬ್ಬಳ್ಳಿಯ ಪ್ರಖ್ಯಾತ ವಕೀಲರಾದ ಗುರುಸಿದ್ಧಪ್ಪ ಮಿರ್ಜಿ, ಡಾ. ಜೆ. ರುದ್ರಪ್ಪ ಮೊದಲಾದ ಪ್ರಮುಖರಿದ್ದರು. ಅವರೆಲ್ಲರೂ ಸೇರಿ ಶಾಸ್ತ್ರಿಗಳಿಗೆ ಉಪಾಧ್ಯಾಯ ವೃತ್ತಿಯನ್ನು ಬಿಟ್ಟು ಕೀರ್ತನೆ ಭಾಷಣಗಳಿಂದ ಜನಜಾಗೃತಿಯನ್ನು ಮಾಡಿದರೆ ನಾಡಿಗೂ ಜನತೆಗೂ ತುಂಬ ಉಪಕಾರವಾಗುತ್ತದೆ ಎಂದು ಹುರಿದುಂಬಿಸಿದರು.

**೪. ಪಿ.ಆರ್. ಕರಿಬಸವ ಶಾಸ್ತ್ರಿಗಳಿಂದ ಕನ್ನಡ ಸಂಸ್ಕೃತ ವ್ಯಾಸಂಗ**

ತುಮಕೂರಿನಲ್ಲಿ ಶಾಸ್ತ್ರಿಗಳಿಗೆ ಪೂರ್ವಿಕರ ಮನೆಮಠ ಹೊಲಗದ್ದೆ ಅಲ್ಪಸ್ವಲ್ಪ ಇದ್ದುವು. ಗುಬ್ಬಿಯ ಉಪಾಧ್ಯಾಯ ವೃತ್ತಿ ಎರಡು ವರ್ಷಗಳಿಗೆ ಮುಗಿಯಿತು. ತುಮಕೂರಿನಲ್ಲಿ ನೆಲಸಿದ ಶಾಸ್ತ್ರಿಗಳು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು ಒಂದು ಅವಕಾಶ ಪ್ರಾಪ್ತವಾಯಿತು. ಮೈಸೂರಿನ ಸುಪ್ರಸಿದ್ಧ ವಿದ್ವಾಂಸರಾದ ಆಸ್ಥಾನ ಮಹಾವಿದ್ವಾನ್ ಕರ್ಣಾಟಕ ಭಾಷಾರತ್ನಂ ಪಿ.ಆರ್. ಕರಿಬಸವ ಶಾಸ್ತ್ರಿಗಳು ತುಮಕೂರಿನಲ್ಲಿ ನೆಲಸಿ ವಿಶ್ರಾಂತಿ ಜೀವನವನ್ನು ನಡೆಸುತ್ತಿದ್ದರು. ಶಾಸ್ತ್ರಿಗಳು ಅವರ ಸನ್ನಿಧಿಗೆ ಹೋಗಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಪ್ರೌಢಪಾಠ ಪ್ರವಚನಗಳನ್ನು ಬೋಧಿಸಬೇಕೆಂದು ಪ್ರಾರ್ಥಿಸಿಕೊಂಡರು. ವೃದ್ಧಾಪ್ಯದಲ್ಲಿ ಯೋಗ್ಯಶಿಷ್ಯನ ಸೇವೆ ಲಭಿಸಿದ್ದಕ್ಕಾಗಿ ಸಂತುಷ್ಟರಾದ ಕರಿಬಸವ ಶಾಸ್ತ್ರಿಗಳು ಸುಮಾರು ಆರುವರ್ಷಗಳ ಕಾಲ ಕನ್ನಡ ಮತ್ತು ಸಂಸ್ಕೃತದ ಪ್ರೌಢಕಾವ್ಯಗಳನ್ನೂ, ಧರ್ಮಗ್ರಂಥಗಳನ್ನೂ ಶಿವಮೂರ್ತಿಶಾಸ್ತ್ರಿಗಳಿಗೆ ವಿಶೇಷವಾಗಿ ಬೋಧಿಸಿದರು. ಇದರಿಂದ ಉತ್ತರೋತ್ತರ ಶಿವಮೂರ್ತಿಶಾಸ್ತ್ರಿಗಳಿಗೆ ತುಂಬ ಪ್ರಯೋಜನ ವಾಯಿತು.

ತುಮಕೂರಿನಲ್ಲಿ ವಾಸವಾಗಿದ್ದ ಶಾಸ್ತ್ರಿಗಳು ಕೀರ್ತನೆ ಮತ್ತು ಭಾಷಣಗಳಿಗೆ ಆಹ್ವಾನ ಬಂದಾಗ ಬೇರೆ ಬೇರೆ ಸ್ಥಳಗಳಿಗೆಲ್ಲಾ ಹೋಗಿಬರುತ್ತಿದ್ದರು. ಇದರಿಂದ ಅವರ ಉಪಜೀವನ ನಡೆಯುತ್ತಿತ್ತು. ಸುಮಾರು ೧೯೩೬ರವರೆಗೆ ಈ ಪ್ರವಚನ ಪ್ರವಾಸವನ್ನು ಮಾಡಿದರು. ಇದರಿಂದಾದ ಅನುಭವಗಳನ್ನು ಪ್ರಯೋಜನವನ್ನು ಹೀಗೆ ಹೇಳಿಕೊಂಡಿದ್ದಾರೆ. "ದೇಶಾಟನದಲ್ಲಿ ಅನೇಕ ಅನುಭವಗಳು ಉಂಟಾದುವು. ತೀರ್ಥಕ್ಷೇತ್ರಗಳನ್ನೂ ಐತಿಹಾಸಿಕ ಸ್ಥಳಗಳನ್ನೂ ಅಗತ್ಯವಾಗಿ ಸಂದರ್ಶಿಸುತ್ತಿದ್ದೆನು. ನಾಡಿನ ಮನೆಮಠಗಳಲ್ಲಿ ಅವಿತುಕೊಂಡು ಕೂತಿದ್ದ ತಾಳೆಗರಿ ಗ್ರಂಥಗಳನ್ನು, ತಾಮ್ರಶಾಸನಗಳು ಮೊದಲಾದುವುಗಳನ್ನು ಸಂಗ್ರಹಿಸುತ್ತಿದ್ದೆನು. ಇಷ್ಟುಹೊತ್ತಿಗೆ ನಾನು ಕನ್ನಡ ನಾಡಿಗೆ ತಕ್ಕಷ್ಟು ಪರಿಚಿತನಾದೆನು." (ಜೀವನ ಸ್ಮೃತಿಗಳು, ಪುಟ. ೧೦)

**೫. ಸ್ವಾತಂತ್ರ್ಯ ಚಳವಳಿ**

ಭರತಖಂಡದಲ್ಲಿ ಸ್ವಾತಂತ್ರ್ಯ ಚಳವಳಿಯೂ ಕರ್ಣಾಟಕದಲ್ಲಿ ಏಕೀಕರಣ ಚಳವಳಿಯೂ ನಡೆಯುತ್ತಿದ್ದ ಕಾಲ ಅದು. ಈ ಸಂಬಂಧವಾಗಿ ಆ ಕಾಲದಲ್ಲಿ ತುಮಕೂರಿಗೆ ಬಂದು ಹೋದ ಕಡಪ ರಾಘವೇಂದ್ರರಾಯರು, ಕೊಪ್ಪಳದ ಜಯರಾಮಾಚಾರ್ಯರು, ದೇಶಪಾಂಡೆ ಗಂಗಾಧರರಾಯರು, ಹರ್ಡೇಕರ್ ಮಂಜಪ್ಪನವರು, ಮುದವೀಡು ಕೃಷ್ಣರಾಯರು, ಆಲೂರು ವೆಂಕಟರಾಯರು ಮೊದಲಾದ ಮಹನೀಯರ ಪರಿಚಯ ಮಾಡಿಕೊಂಡರು.

ಮಹಾತ್ಮ ಗಾಂಧಿ, ರಾಜಗೋಪಾಲಚಾರಿ, ಮಹದೇವ ದೇಸಾಯಿ ಅವರು ೧೯೨೭ರಲ್ಲಿ ತುಮಕೂರಿಗೆ ಬಂದಿದ್ದರು. ಶಾಸ್ತ್ರಿಗಳು ಗಾಂಧೀಜಿಯವರ ಭಾಷಣ ಕೇಳಲು ಪ್ರತಿದಿನವೂ ತಪ್ಪದೆ ಹೋಗುತ್ತಿದ್ದರು. ಶಾಸ್ತ್ರಿಗಳಿಗೆ ಬರುತ್ತಿದ್ದ ಹಿಂದಿಭಾಷೆಯ ನೆರವಿನಿಂದ ಗಾಂಧೀಜಿ ಭಾಷಣಗಳನ್ನು ಅರ್ಥಮಾಡಿಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ 'ಗಾಂಧಿ ಗೀತೆಗಳು' ಎಂಬ ಕವನ ಸಂಕಲನವನ್ನು ಬರೆದು ಗಾಂಧೀಜಿಗೆ ಅರ್ಪಿಸಿದರು. ಆಗ ತುಮಕೂರಿನ ಮುಖಂಡರಾಗಿದ್ದ ಕೆ. ರಂಗಯ್ಯಂಗಾರ್, ಟಿ. ಸುಬ್ರಹ್ಮಣ್ಯಂ ಮೊದಲಾದವರು ಪ್ರಾರಂಭಿಸಿದ್ದ ಸ್ವದೇಶಿ ಚಳವಳಿ ಶಾಸ್ತ್ರಿಗಳ ಮನಸ್ಸಿನ ಮೇಲೆ ತುಂಬ ಪರಿಣಾಮವನ್ನು ಮಾಡಿತು. ಜಿಲ್ಲೆಯ ಮುಖಂಡರು

ಶಾಸ್ತ್ರಿಗಳನ್ನೂ ಜತೆಯಲ್ಲಿ ಭಾಷಣಕ್ಕೆ ಎಲ್ಲ ಕಡೆಗೂ ಕರೆದುಕೊಂಡು ಹೋಗುತ್ತಿದ್ದರು. ಇದರಿಂದ ತುಮಕೂರು ಜಿಲ್ಲೆಯ ಜನರಿಗೆ ಶಾಸ್ತ್ರಿಗಳ ಪರಿಚಯ ಸಾಕಷ್ಟಾಯಿತು. ಇದೇ ಕಾಲದಲ್ಲಿ ಮದರಾಸಿನಲ್ಲಿ ಡಾ. ಅಸ್ಸಾರಿ ಅವರ ಆಧ್ಯಕ್ಷತೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನಡೆಯಿತು. ಶಾಸ್ತ್ರಿಗಳು ಈ ಅಧಿವೇಶನಕ್ಕೆ ಹೋಗಿ ಪಂಡಿತ ಜವಹರ್‌ಲಾಲ್ ನೆಹರು, ಸರೋಜಿನಿದೇವಿ, ಸರ್ದಾರ್ ಪಟೇಲ್ ಮೊದಲಾದ ಮುಖಂಡರ ದರ್ಶನವನ್ನು ಪಡೆದರು.

**೬. ಮದರಾಸು ಪ್ರವಾಸ**

ಇದೇ ಸಮಯದಲ್ಲಿ ಮದರಾಸಿನ ಅಡಿಯಾರ್‌ನಲ್ಲಿ ಥಿಯಸಾಫಿಕಲ್ ಕಾನ್ಫರೆನ್ಸ್ ನಡೆಯುತ್ತಿತ್ತು. ಶಾಸ್ತ್ರಿಗಳು ಈ ಸಭೆಯಲ್ಲೂ ಭಾಗವಹಿಸಿದ್ದರು. ಆಗ ಅವರಿಗೆ ಜೆ. ಕೃಷ್ಣಮೂರ್ತಿ ಅರುಂಡೇಲ್ ಅವರ ಸಂಪರ್ಕವಾಯಿತು. ಅವರು ಶಾಸ್ತ್ರಿಗಳಿಗೆ ಡಾ. ಅನಿಬೆಸೆಂಟರ ಮಹತ್ವವನ್ನು ತಿಳಿಸಿದ್ದಲ್ಲದೆ ಥಿಯಸಾಫಿಕಲ್ ತತ್ವಗಳನ್ನೂ ಮನವರಿಕೆ ಮಾಡಿಕೊಟ್ಟರು. ಈ ಸಂಬಂಧವಾದ ಕೆಲವು ಗ್ರಂಥಗಳನ್ನು ಶಾಸ್ತ್ರಿಗಳು ಕೊಂಡು ಓದಿದರು. ದೇಶ ವಿದೇಶಗಳಿಂದ ಬಂದಿದ್ದ ಜನ ಥಿಯಾಸಫಿ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಜನಸೇವೆಗೆ ಸಿದ್ಧರಾಗುತ್ತಿದ್ದುದು ಶಾಸ್ತ್ರಿಗಳ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಬೀರಿತು. ತುಮಕೂರಿನ ಕೆಲವರು ಈ ಸಮ್ಮೇಳನಕ್ಕೆ ಬಂದಿದ್ದರು.

ಮದರಾಸಿನ ಪ್ರವಾಸ ಶಾಸ್ತ್ರಿಗಳಿಗೆ ತುಂಬ ಪ್ರಯೋಜನಕಾರಿಯಾಯಿತು. ಅಪಾರ ಲೋಕಾನುಭವವನ್ನು ತಂದುಕೊಟ್ಟಿತು. ಶಾಸ್ತ್ರಿಗಳು ಸಮುದ್ರವನ್ನು ಮೊದಲ ಬಾರಿ ಕಂಡದ್ದು ಮದರಾಸಿಗೆ ಹೋಗಿದ್ದಾಗಲೇ. ಈ ಸ್ವಾರಸ್ಯ ಪ್ರಕರಣವನ್ನು ಅವರ ಮಾತುಗಳಿಂದಲೇ ಕೇಳೋಣ. “ನಾನು ಸಮುದ್ರವನ್ನು ನೋಡಿದುದು ಆಗಲೇ. ಸಮುದ್ರಸ್ನಾನ ಮಾಡಿದುದು ಆಗಲೇ. ಮದರಾಸು ಬಂದರನ್ನು ಕೂಡ ಇದೇ ಸಂದರ್ಭದಲ್ಲಿ ನೋಡಿದುದು. ಸಮುದ್ರದ ವರ್ಣನೆಯನ್ನು ನಾನು ಕಾವ್ಯಗಳಲ್ಲಿ ಓದಿದ್ದೆನು. ಪ್ರತ್ಯಕ್ಷವಾಗಿ ಸಮುದ್ರವನ್ನು ಕಂಡು ಅಲ್ಲಿ ಏಳುವ ಅಲೆಗಳನ್ನು ನೋಡಿ, ಅದರ ವಿಸ್ತಾರ ಗಾಂಭೀರ್ಯಗಳನ್ನು ಕಂಡು ನನ್ನ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮವುಂಟಾಯಿತು. ಮದರಾಸು ಬಂದರಿಗೆ ನೋಡಲು ಹೋದಾಗ ಒಂದು ದೋಣಿಯಲ್ಲಿ ಕುಳಿತುಕೊಂಡು ಸಮುದ್ರದಲ್ಲಿ ಅಲೆದಾಡಬೇಕೆಂಬ ಆಸೆಯುಂಟಾಯಿತು. ದೋಣಿಯವನಿಗೆ ಶುಲ್ಕವನ್ನು ಕೊಟ್ಟು ಅದೇ ದಿನ ನಾನು ಕೊಂಡು ಕೊಂಡಿದ್ದ ಹೊಸಚಪ್ಪಲಿಗಳನ್ನು ಸಮುದ್ರ ತೀರದಲ್ಲಿ ಬಿಟ್ಟು ಸಮುದ್ರರಾಜನಿಗೆ ಕೈಮುಗಿದು ಬರಿಗಾಲಿನಲ್ಲಿ ದೋಣಿಯನ್ನು ಹತ್ತಿದೆನು. ದೋಣಿಯವನು ಕೊಂಚದೂರ ಸಮುದ್ರದಲ್ಲಿ ಓಡಾಡಿಸಿ ನನ್ನನ್ನು ದಡಕ್ಕೆ ತಂದುಬಿಟ್ಟನು. ಆಗ ನಾನು ಬಿಟ್ಟಿದ್ದ ಹೊಸಚಪ್ಪಲಿಗಳು ಕಾಣದಾದವು. ಪ್ರಾಯೇಣ ಯಾರೋ ಬುದ್ಧಿವಂತರು ಅವನ್ನು ಅಪಹರಿಸಿರಬೇಕು. ಕಾಲಿನಲ್ಲಿ ಚಪ್ಪಲಿಯನ್ನು ಹಾಕಿಕೊಂಡು ದೋಣಿಯಲ್ಲಿ ಕುಳಿತರೆ ಸಮುದ್ರರಾಜನಿಗೆ ಅಪಚಾರ ಮಾಡಿದಂತಾಗುತ್ತದೆ ಎಂಬುದು ನನ್ನ ಮನೋಭಾವನೆಯಾಗಿತ್ತು. ಆ ದೋಣಿಯಲ್ಲಿದ್ದ ಜನರೆಲ್ಲರೂ ಕಾಲಿಗೆ ಚಪ್ಪಲಿಯನ್ನು ಹಾಕಿಕೊಂಡೇ ಇದ್ದರು. ಅದನ್ನು ನೋಡಿ ನಾನು ಇಲ್ಲಿ ಮೂಢನಂಬಿಕೆಯಿಂದ ವರ್ತಿಸಿದೆನು. ಚಪ್ಪಲಿಯನ್ನು ಬಿಟ್ಟು ಹೋಗಬಾರದಿತ್ತು ಎಂದು ಕೊಂಡೆನು. ಈ ಸುದ್ದಿಯನ್ನು ಮದರಾಸಿನಲ್ಲಿ ನಾನು ವಸತಿಮಾಡಿಕೊಂಡಿದ್ದ ಗುರುಬಸವ ಮತ್ತು ಕಂಪನಿ ಮಾಲೀಕರಿಗೆ ತಿಳಿಸಿದೆನು. ಅವರ ಮನೆಯವರು ನನ್ನ ಈ ಅವ್ಯವಹಾರವನ್ನು ಕೇಳಿ ಹೊಟ್ಟೆ ಹುಣ್ಣಾಗುವಂತೆ ನಕ್ಕರು. ಅದರಿಂದ ನನಗೆ ತುಂಬ ನಾಚಿಕೆಯಾಗಿ, ಕಾಲದೇಶ ವರ್ತಮಾನಗಳನ್ನು ಅರಿತು ನಡೆಯಬೇಕೆಂಬ ಅನುಭವವಾಯಿತು.” (ಜೀವನ ಸ್ಮೃತಿಗಳು, ಪುಟ. ೮ – ೯)

ಮದರಾಸಿನಲ್ಲಿ ಶಿವಮೂರ್ತಿಶಾಸ್ತ್ರಿಗಳು ಉಳಿದುಕೊಳ್ಳಲು ಆಶ್ರಯ ನೀಡಿದ್ದ ಗುರುಬಸವ ಅಂಡ್ ಕಂಪನಿ ಮಾಲೀಕರಾದ ನಾಗಪ್ಪ ಚೆಟ್ಟಿಯಾರ್ ತಮಿಳಿನಲ್ಲಿ ದೊಡ್ಡ ವಿದ್ವಾಂಸರು. ಅವರು ಪೆರಿಯಪುರಾಣಂ, ಪ್ರಭುಲಿಂಗಲೀಲೈ, ಸಿದ್ಧಾಂತಶಿಖಾಮಣಿ ಮೊದಲಾದ ಹಲವಾರು ಗ್ರಂಥಗಳನ್ನು ಪ್ರಕಟಿಸಿದ್ದರು. ಆ ಗ್ರಂಥಗಳನ್ನೆಲ್ಲ ಶಿವಮೂರ್ತಿಶಾಸ್ತ್ರಿಗಳಿಗೆ ಕೊಟ್ಟದ್ದೇ ಅಲ್ಲದೆ ಶಾಸ್ತ್ರಿಗಳು ಕೇಳಿದ ತೇವಾರಂ, ತಿರುವಾಚಕಂ, ತಿರುಕ್ಕುರಳ್ ಮೊದಲಾದ ಗ್ರಂಥಗಳನ್ನು ಶೈವಸಿದ್ಧಾಂತಭವನದಿಂದ ಕೊಡಿಸಿಕೊಟ್ಟರು. ಅಲ್ಲದೆ ತೆಲುಗಿನಲ್ಲಿ ಪ್ರಕಟವಾಗಿದ್ದ ವೇಮನ ಪದ್ಯಮುಲು, ಪಂಡಿತಾರಾಧ್ಯ ಚರಿತ್ರಮು, ವೃಕ್ಷಾಧಿಪ ಶತಕಮು ಎಂಬ ವೀರಶೈವ ಗ್ರಂಥಗಳನ್ನು ದೊರಕಿಸಿಕೊಟ್ಟರು. ಅವರ ಈ ಉಪಕಾರವನ್ನು ಶಾಸ್ತ್ರಿಗಳು ತುಂಬುಹೃದಯದಿಂದ ಸ್ಮರಿಸಿಕೊಳ್ಳುತ್ತಿದ್ದರು.

ಮದರಾಸಿನಲ್ಲಿದ್ದ ಎಲ್ಲ ಪ್ರೇಕ್ಷಣೀಯ ಸ್ಥಳಗಳನ್ನೂ, ದೇವಾಲಯಗಳನ್ನೂ ನೋಡಿದ ಮೇಲೆ ಕಂಚಿಗೆ ಹೋಗಿ ಇತಿಹಾಸ ಪ್ರಸಿದ್ಧವಾದ ಏಕಾಮ್ರನಾಥ ದೇವಾಲಯ, ರೇವಣಸಿದ್ಧ ದೇವಾಲಯ, ಶಂಕರಾರಾಧ್ಯರ ಮಠ, ಕಾಮಾಕ್ಷಿ ದೇವಾಲಯ, ವಿಷ್ಣುಕಂಚಿಯಲ್ಲಿನ ವರದರಾಜಸ್ವಾಮಿ ದೇವಾಲಯ ಇವೆಲ್ಲವನ್ನು ಸಂದರ್ಶಿಸಿದರು. ಜೊತೆಗೆ ಬಸವ ಪುರಾಣವನ್ನು ಸಂಸ್ಕೃತದಲ್ಲಿ ಬರೆದ ಶಂಕರಾರಾಧ್ಯರ ಸಮಾಧಿ, ಬಸವೇಶ್ವರ ದೇವಾಲಯಗಳನ್ನು ನೋಡಿಬಂದರು. ಮದರಾಸು ಮತ್ತು ಕಂಚಿಯ ಪ್ರವಾಸವು ಹೆಚ್ಚಿನ ಜ್ಞಾನಾರ್ಜನೆಗೆ ನೆರವಾದುವು ಎಂದು ಶಾಸ್ತ್ರಿಗಳೇ ಹೇಳಿಕೊಂಡಿದ್ದಾರೆ.

**೭. ಅಖಂಡ ಕರ್ನಾಟಕ ಸಂಚಾರ**

೧೯೨೬ ರಿಂದ ೧೯೩೬ರ ಹತ್ತು ವರ್ಷಗಳ ಅವಧಿ ಶಾಸ್ತ್ರಿಗಳ ಜೀವನ ಘಟ್ಟದಲ್ಲಿ ಬಹುಮುಖ್ಯವಾದುದು. ಈ ಅವಧಿಯಲ್ಲಿ ಅಖಂಡ ಕರ್ನಾಟಕವನ್ನು ಸುತ್ತಿ ಕನ್ನಡ ಪ್ರಚಾರ ಕಾರ್ಯಗಳನ್ನು ಮಾಡಿದ್ದಾರೆ. ತಮ್ಮ ಕೀರ್ತನ ಮತ್ತು ಪ್ರವಚನಗಳಿಂದ ಜನ ಜಾಗೃತಿಯನ್ನು ಉಂಟುಮಾಡಿದ್ದಾರೆ. ಈ ಎಲ್ಲ ವಿವರಗಳನ್ನೂ ಶಾಸ್ತ್ರಿಗಳೇ ದಾಖಲಿಸಿದ್ದಾರೆ. “೧೯೨೬ರಿಂದ ೧೯೩೬ವರೆಗೆ ಕರ್ನಾಟಕವನ್ನೆಲ್ಲಾ ಸುತ್ತಾಡುವ ಕಾಲದಲ್ಲಿ ಶೃಂಗೇರಿ, ಶ್ರವಣಬೆಳಗೊಳ, ರಂಭಾಪುರಿ, ಚಿತ್ರದುರ್ಗ, ಶಿವಯೋಗ ಮಂದಿರ, ಗದಗ, ನಿಡಸೋಸಿ, ಹುಬ್ಬಳ್ಳಿ, ಶ್ರೀಶೈಲ, ಹೊಂಬುಜ, ಕಲ್ಬುರ್ಗಿ, ಉಜ್ಜಯಿನಿ, ಸಿದ್ಧಗಿರಿ ಮೊದಲಾದ ಮಠಾಧೀಶ್ವರರ ಕೃಪೆಗೆ ಪಾತ್ರನಾದೆನು. ಈ ಹತ್ತುವರ್ಷದ ಅವಧಿಯಲ್ಲಿ ಉದಯಗಿರಿಯಿಂದ ನೀಲಗಿರಿವರೆಗೆ, ಮಂಗಳೂರಿಂದ ರಾಯದುರ್ಗದವರೆಗೆ, ಕೊಳ್ಳೇಗಾಲದಿಂದ ಕಾರವಾರದವರೆಗೆ, ಕಾಸರಗೋಡಿನಿಂದ ರಾಯದುರ್ಗದವರೆಗೆ ಇರುವ ಕನ್ನಡ ನಾಡಿನ ಭಾಗವನ್ನೆಲ್ಲಾ ಸಂಚರಿಸಿದೆನು. ಶೃಂಗೇರಿ, ಶಿವಗಂಗೆ, ತಲಕಾಡು, ನಂಜನಗೂಡು, ಹಂಪೆ, ಬನಶಂಕರಿ, ಮಹಾಕೂಟ, ಗೋಕರ್ಣ, ಉಡುಪಿ, ಮೇಲುಕೋಟೆ, ಧರ್ಮಸ್ಥಳ, ಕೊಲ್ಲೂರು, ಕುಕ್ಕೆಸುಬ್ರಹ್ಮಣ್ಯ, ಕೆಳದಿ, ಇಕ್ಕೇರಿ, ಭುವನಗಿರಿದುರ್ಗ, ಹುಬ್ಬಳ್ಳಿ, ಕೊಲ್ಲಾಪುರ, ಕೊಪ್ಪಳ, ಆವನಿ, ಕೂಡುಮಲೆ, ಉಳವಿ, ಮುಳಬಾಗಿಲು, ನಂದಿಬೆಟ್ಟ, ಕಲ್ಹತ್ತಗಿರಿ, ಶ್ರೀರಂಗಪಟ್ಟಣ, ಚಾಮರಾಜನಗರ, ಹರದನಹಳ್ಳಿ, ಮಹದೇಶ್ವರಬೆಟ್ಟ, ಎಡೆಯೂರು, ಕಗ್ಗೆರೆ ಅಮರೇಶ್ವರ, ತಲಕಾವೇರಿ, ಮಡಕೇರಿ, ಸ್ವಾದಿ, ಬಿಳಗಿ, ಕಿತ್ತೂರು, ಬೆಳವಡಿ, ನಾಯಕನಹಟ್ಟಿ, ಹಳೇಬೀಡು, ಹರಿಹರ, ಅಥಣಿ, ಬೇಲೂರು, ಮುದೇನೂರು, ಕೆಂಭಾವಿ, ದೇವಪುರ, ಎಲ್ಲೋರ, ಅಜಂತ, ಐಹೊಳೆ, ಪಟ್ಟದಕಲ್ಲು, ಇಳಕಲ್ಲು, ಕಾರ್ಕಳ, ಮೂಡಬಿದ್ರೆ, ಸೋಮನಾಥಪುರ, ವೇಣೂರು, ನೀಲಗಿರಿ, ಪೊಟ್ಟಲಕೆರೆ ಇತ್ಯಾದಿ ಸ್ಥಳಗಳನ್ನೆಲ್ಲಾ ಸುತ್ತುತ್ತಾ ಬಂದೆನು. ಉತ್ತರದಲ್ಲಿ ಸೊಲ್ಲಾಪುರ, ಮೀರಜ್, ಸಾಂಗ್ಲಿ, ಕೊಲ್ಲಾಪುರ, ಸಿದ್ಧಗಿರಿ, ಅಕ್ಕಲಕೋಟೆ, ಮಂಗಳವೇಡೆ, ದುಧನಿ, ಪುಂಡರಾಪುರ, ತುಳಜಾಪುರ ಇವುಗಳ ಪರ್ಯಂತ ಹೋಗಿ ಬಂದೆನು. ನಾನು ಈ ಕಾಲದಲ್ಲಿ ಜಯಕರ್ಣಾಟಕ, ಶಿವಾನುಭವ, ವಿಶ್ವಕರ್ಣಾಟಕ, ಲೋಕಮತ, ನವಕರ್ಣಾಟಕ, ತಾಯಿನಾಡು ಮೊದಲಾದ ಪತ್ರಿಕೆಗಳಿಗೆ ಲೇಖನ ಬರೆಯುತ್ತಿದ್ದೆನು. ಕನ್ನಡ ಪ್ರಚಾರದ ಕಾರ್ಯಕ್ಕಾಗಿ ಸುತ್ತುವ ಕಾರ್ಯದಲ್ಲಿ ಪಿಟೀಲು ನುಡಿಸುವ, ಮೃದಂಗ ಬಾರಿಸುವ, ಕಂಜರಿ ನುಡಿಸುವ, ಹಾರ್ಮೋನಿಯಂ ನುಡಿಸುವ ಉತ್ತಮ ಕಲಾವಿದರು ನನ್ನ ಜೊತೆಯಲ್ಲಿಯೇ ಇರುತ್ತಿದ್ದರು. ಈ ಕಾರಣದಿಂದ ನನ್ನ ಕೀರ್ತನ ಭಾಷಣಗಳು ಜನಪ್ರಿಯವಾಗಿ ಈಗ ಕನ್ನಡವನ್ನು ವಿರೋಧಿಸುತ್ತಿರುವ ಮರಾಠಿ ಜನಗಳು ಕೂಡ ನನ್ನ ಕೀರ್ತನೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು.” (ಜೀವನ ಸ್ಮೃತಿಗಳು ಪುಟ ೧೧ - ೧೨)

**೮. ಬೆಂಗಳೂರಿಗೆ ಬಂದು ನೆಲೆಸಿದ್ದು**

ಶಿವಮೂರ್ತಿಶಾಸ್ತ್ರಿಗಳ ಜೀವನದ ಒಂದು ಬಹುಮುಖ್ಯ ಘಟ್ಟ ಎಂದರೆ ಅವರು ತುಮಕೂರಿನಿಂದ ಬೆಂಗಳೂರಿಗೆ ಬಂದು ನೆಲಸಿದ್ದು. ಅದಕ್ಕೆ ಒದಗಿ ಬಂದ ಸನ್ನಿವೇಶಗಳು ಇಂತಿವೆ. ೧೯೨೭ರಲ್ಲಿ ತುಮಕೂರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ದಯಮಾಡಿಸಿದ್ದರು. ಸರ್ ಮಿರ್ಜಾ ಇಸ್ಮಾಯಿಲ್ ಸಾಹೇಬರು ಆಗ ಮೈಸೂರಿನ ದಿವಾನರಾಗಿದ್ದರು. ಮಹಾರಾಜರ ಆಗಮನದ ಸವಿನೆನಪಿಗಾಗಿ ತುಮಕೂರಿನ ಸ್ವಾಗತ ಸಮಿತಿಯ ಪರವಾಗಿ “ನಾಲ್ವಡಿ ಕೃಷ್ಣರಾಜವಿಳಾಸ” ಎಂಬ ಕಿರುಕೃತಿಯನ್ನು ಚಂಪೂಶೈಲಿಯಲ್ಲಿ ಬರೆದು ಸಭೆಯಲ್ಲಿ ಓದಿ ಮಹಾರಾಜರಿಗೆ ಶಾಸ್ತ್ರಿಗಳು ಅರ್ಪಿಸಿದರು. ಅದು ಎಲ್ಲರ ಮೆಚ್ಚುಗೆಗೂ ಪಾತ್ರವಾಯಿತು. ಸರ್ ಮಿರ್ಜಾ ಇಸ್ಮಾಯಿಲ್ ಅವರ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮವನ್ನುಂಟುಮಾಡಿತು.

ಸರ್ ಮಿರ್ಜಾ ಇಸ್ಮಾಯಿಲ್ ಸಾಹೇಬರು ೧೯೨೭ರಲ್ಲಿ ಮೈಸೂರಿನ ದಿವಾನರಾದರು. ಅವರು ಮೊದಲ ಪ್ರವಾಸವನ್ನು ತುಮಕೂರು ಜಿಲ್ಲೆಯಲ್ಲಿ ಮಾಡಿದರು. ಮಧುಗಿರಿಯಲ್ಲಿ ನಂಜಯ್ಯ ಶೆಟ್ಟಿ ಅವರು ಕಟ್ಟಿಸಿಕೊಟ್ಟಿದ್ದ ಲೋಕಮಾನ್ಯತಿಲಕ ಸ್ಮಾರಕಮಂದಿರದ ಪ್ರಾರಂಭೋತ್ಸವವನ್ನು ಸರ್ ಮಿರ್ಜಾ ಸಾಹೇಬರು ನಡೆಸಿಕೊಟ್ಟರು. ಆ ಸಂದರ್ಭದಲ್ಲಿ ಲೋಕಮಾನ್ಯ ತಿಲಕರನ್ನು ಕುರಿತು ಶಾಸ್ತ್ರಿಗಳು ಸ್ವಾಗತಗೀತೆಯನ್ನು ಬರೆದು ಹಾಡಿದರು. ಭಾಷಣವನ್ನು ಮಾಡಿದರು. ದಿವಾನರು ಶಾಸ್ತ್ರಿಗಳ ಕವಿತಾಶಕ್ತಿಯನ್ನೂ ವಾಕ್ಪ್ರೌಢಿಮೆಯನ್ನೂ ಬಹಳವಾಗಿ ಮೆಚ್ಚಿಕೊಂಡು ಬೆಂಗಳೂರಿಗೆ ಬಂದು ತಮ್ಮನ್ನು ಕಾಣುವಂತೆ ತಿಳಿಸಿದರು. ಶಾಸ್ತ್ರಿಗಳು ಬೆಂಗಳೂರಲ್ಲಿ ನೆಲಸಲು ಇದು ಅಂಕುರಾರ್ಪಣವಾಯಿತು. ಅಲ್ಲದೆ ಶಾಸ್ತ್ರಿಗಳ ಹಲವಾರು ಹಿತೈಷಿಗಳು ಬೆಂಗಳೂರಿಗೆ ಬಂದು ನೆಲೆಸುವಂತೆ ಶಾಸ್ತ್ರಿಗಳನ್ನು ಹುರಿದುಂಬಿಸುತ್ತಲೇ ಇದ್ದರು. ಅವರಲ್ಲಿ ಸರ್ ಕೆ.ಪಿ. ಪುಟ್ಟಣ್ಣ ಶೆಟ್ಟರು, ದಿವಾನ್ ಬಹಾದ್ದೂರ್ ಪಿ. ಮಹಾದೇವಯ್ಯನವರು, ಜಿ. ಶಾಂತವೀರಪ್ಪನವರು, ಸರ್ ಮಿರ್ಜಾ ಸಾಹೇಬರು ಪ್ರಮುಖರು. ೧೯೩೭ರಲ್ಲಿ ತಮ್ಮನ್ನು ಬೆಂಗಳೂರಿಗೆ ತಂದು ನಿಲ್ಲಿಸಿದ ಈ ಮಹನೀಯರನ್ನು ತ್ರಿಕಾಲದಲ್ಲೂ ಸ್ಮರಿಸುತ್ತಿರುವುದಾಗಿ ಶಾಸ್ತ್ರಿಗಳು ಹೇಳಿಕೊಂಡಿದ್ದಾರೆ.

**೯. ಮುದ್ರಣಾಲಯ, ಪತ್ರಿಕೆಗಳ ಪ್ರಾರಂಭ – ಸ್ವಾರಸ್ಯ ಅನುಭವಗಳು**

ಬೆಂಗಳೂರಿಗೆ ಬಂದ ಶಾಸ್ತ್ರಿಗಳು ೧೯೩೭ರಲ್ಲಿ "ಶರಣ ಸಾಹಿತ್ಯ" ಎಂಬ ಮಾಸಪತ್ರಿಕೆಯನ್ನೂ ೧೯೩೯ರಲ್ಲಿ "ಸ್ವತಂತ್ರ ಕರ್ಣಾಟಕ" ಎಂಬ ವಾರಪತ್ರಿಕೆಯನ್ನೂ ಪ್ರಾರಂಭಿಸಿದರು. ೧೯೪೦ರಲ್ಲಿ ಸ್ವತಂತ್ರ ಕರ್ಣಾಟಕ ಮುದ್ರಣಾಲಯವನ್ನು ಸ್ಥಾಪಿಸಿದರು. ವಾರಪತ್ರಿಕೆಯಾದ ಸ್ವತಂತ್ರ ಕರ್ಣಾಟಕ ಬಹುಕಾಲ ನಡೆಯಲಿಲ್ಲ. ೧೯೩೯ರಲ್ಲಿ ಪ್ರಾರಂಭಿಸಿದ ಈ ಪತ್ರಿಕೆ ೧೯೪೨ರಲ್ಲೇ ನಿಂತು ಹೋಯಿತು. ಪತ್ರಿಕಾ ಪ್ರಕಟಣೆ ಮುದ್ರಣಾಲಯ ಸ್ಥಾಪನೆ ಇವುಗಳಿಂದಾದ ಕಷ್ಟ - ನಷ್ಟಗಳನ್ನು, ಸ್ವಾರಸ್ಯ ಪ್ರಕರಣಗಳನ್ನು ಶಾಸ್ತ್ರಿಗಳ ಬಾಯಿಂದಲೇ ಕೇಳಬೇಕಾಗಿದೆ. "ನಮ್ಮ ಆಫೀಸ್ ಮ್ಯಾನೇಜರು ಒಬ್ಬ ಇದ್ದ. ಅವನು ತುಂಬಾ ಮೋಸಗಾರ. ದಗಲ್‌ಬಾಜಿಗರ ಜಗದ್ಗುರು ಎಂದರೆ ಸಲ್ಲುತ್ತದೆ. ಅವನು ನನ್ನನ್ನು ಬಹಳವಾಗಿ ವಂಚಿಸಿದನು. ನಾನು ಮುದ್ರಣಾಲಯವನ್ನು ಸ್ಥಾಪಿಸುವಾಗ ಮದರಾಸಿನಿಂದ ಹೊಸ ಇಂಗ್ಲಿಷ್ ಟೈಪ್ಸ್ ಪ್ಯಾಕೆಟ್ಸ್‌ಗಳನ್ನು ತಂದು ಹಾಗೆಯೇ ಬಿಚ್ಚದಂತೆ ಕಪಾಟದಲ್ಲಿ ಇರಿಸಿ ಸಮಯ ಬಂದಾಗ ಇದನ್ನು ಬಿಚ್ಚಿಕೊಳ್ಳೋಣ ಎಂದು ಹೇಳಿದನು. ನಾನು ನಿಜವೆಂದು ನಂಬಿ ಆ ಪ್ಯಾಕೆಟ್‌ಗಳನ್ನು ರೂಮಿನಲ್ಲಿಟ್ಟೆನು. ಬೀರುವಿನ ಕೀಲಿಕ್ಕೆ ಅವನಿಗೆ ಆಗಾಗ್ಯೆ ಕೊಡಬೇಕಾಗುತ್ತಿತ್ತು. ನಾನು ಊರಿನಲ್ಲಿಲ್ಲದಾಗ ಅವನೇ ಯಜಮಾನನಂತೆ ಇರುತ್ತಿದ್ದನು. 'ಅತಿವಿನಯಂ ಧೂರ್ತ ಲಕ್ಷಣಂ' ಎನ್ನುವುದು ಅವನಿಗೆ ಅಕ್ಷರಶಃ ಸಲ್ಲುವುದು. ಕೆಲವು ದಿನಗಳ ನಂತರ ನಾನು ಬೀರು ತೆಗೆದು ನೋಡಿದಾಗ ಆ ಟೈಪಿನ ಪಾಕೆಟ್‌ಗಳು ಇರಲಿಲ್ಲ. ಮ್ಯಾನೇಜರು ಅವನ್ನು ಪಕ್ಕದ ಇನ್ನೊಂದು ಮುದ್ರಣಾಲಯದವರಿಗೆ ಅಗ್ಗವಾಗಿ ಮಾರಿದ್ದನು. ನಾನು ಕೇಳಿದಾಗ ಯಾರೋ ನಮ್ಮ ಕೆಲಸಗಾರರು ಮೋಸಮಾಡಿದ್ದಾರೆಂದು ಹೇಳಿದನು. ಇನ್ನೊಂದು ಸಂದರ್ಭದಲ್ಲಿ ಆ ಮನುಷ್ಯನು ನಮ್ಮ ಸ್ವತಂತ್ರ ಕರ್ಣಾಟಕ ವಾರಪತ್ರಿಕೆಗೆ ಚಂದಾದಾರರ ಮತ್ತು ಏಜೆಂಟರ ವಿಳಾಸದ ಪಟ್ಟಿಗಳಿದ್ದ ಲೆಕ್ಕದ ಪುಸ್ತಕಗಳನ್ನು ನಮ್ಮ ವಿರೋಧ ಪಕ್ಷದವರಿಗೆ ಮಾರಾಟ ಮಾಡಿದ್ದನು. ಇದು ನಾನು ಊರಲಿಲ್ಲದಿದ್ದಾಗ ಆದ ಅಚಾತುರ್ಯ. ನಾನು ಪರಸ್ಥಳದಿಂದ ಹಿಂತಿರುಗಿದ ಕೂಡಲೆ ಲೆಕ್ಕಪುಸ್ತಕಗಳಿರಲಿಲ್ಲ. ಆಗ ನಾನು ಮ್ಯಾನೇಜರವರ ಮೇಲೆ ಪೋಲೀಸರಿಗೆ ದೂರು ಕೊಡಲು ಸಿದ್ಧವಾದಾಗ ಈ ವಿಷಯ ಮ್ಯಾನೇಜರರ ಹೆಂಡತಿ ಮಕ್ಕಳಿಗೆ ಗೊತ್ತಾಗಿ ಅವರು ಬಂದು ನನ್ನ ಕಾಲು ಹಿಡಿದುಕೊಂಡು ಅವರ ತಪ್ಪನ್ನು ಕ್ಷಮಿಸಬೇಕೆಂದು ಗೋಳಿಟ್ಟರು. ನಾನು ಏನು ಮಾಡಿದರೂ ಅವನಿಂದ ಯಾವ ಪ್ರತಿಫಲವೂ ಬರುವಂತಿರಲಿಲ್ಲ. ನಮ್ಮ ಲೆಕ್ಕ ಪತ್ರಗಳನ್ನು ಪ್ರತಿಪಕ್ಷದವರಿಗೆ ಒಪ್ಪಿಸಿದ ಆ ಮ್ಯಾನೇಜರಿಗೆ ಬಂದ ಲಂಚ ೫೦೦ ರೂಗಳು. ನನಗೆ ಆದ ನಷ್ಟ ಸಾವಿರಾರು ರೂಪಾಯಿ. ಈ ಘಟನೆ ನಮ್ಮ ಸ್ವತಂತ್ರ ವಾರ ಪತ್ರಿಕೆಗೆ ಸಂಬಂಧಪಟ್ಟಿದ್ದು." (ಜೀವನ ಸ್ಮೃತಿಗಳು, ಪುಟ. ೧೧ - ೧೩)

"ಇನ್ನು ಶರಣ ಸಾಹಿತ್ಯ ಮಾಸಿಕದ ವಿಚಾರವಾಗಿ ನಾಲ್ಕು ಮಾತುಗಳನ್ನು ಹೇಳಬೇಕಾಗಿದೆ. ಈ ಪತ್ರಿಕೆಯನ್ನು ೧೯೩೭ರಲ್ಲಿ ಪ್ರಾರಂಭಿಸಿದೆನು. ೧೯೭೧ರಲ್ಲಿ ನಿಲ್ಲಿಸಬೇಕಾಯಿತು. ಇದರಲ್ಲಿ ದೊಡ್ಡ ದೊಡ್ಡ ವಿದ್ವಾಂಸರು ಲೇಖನಗಳನ್ನು ಬರೆದಿದ್ದಾರೆ. ಇದು ವಿದ್ವಾಂಸರ ಮನ್ನಣೆ ಗಳಿಸಿದೆ. ತಿಂಗಳಿಗೆ ಸುಮಾರು ಒಂದು ಸಾವಿರ ರೂಪಾಯಿ ವೆಚ್ಚವಾಗುತ್ತಿತ್ತು. ಇದರಿಂದ ನನಗೆ ಬರುತ್ತಿದ್ದ ಹಣ ೫೦೦ - ೬೦೦ ರೂಗಳು. ಉಳಿದ ಹಣವನ್ನು ಮುದ್ರಣಾಲಯಗಳ ಕೆಲಸಗಳಿಂದ ಗ್ರಂಥಗಳ ಮಾರಾಟದಿಂದ ನಾನು ಕೂಡಿಸಬೇಕಾಗುತ್ತಿತ್ತು. ಈ ಮಾಸಿಕದ ಆಶ್ರಯದಲ್ಲಿ ಶರಣ ಸಾಹಿತ್ಯ ಗ್ರಂಥಮಾಲೆಯನ್ನು ಪ್ರಾರಂಭಿಸಿ ಸುಮಾರು ೪೦ ಗ್ರಂಥಗಳನ್ನು

ಸಂಪಾದಿಸಿ, ಸಂಶೋಧಿಸಿ, ಸ್ವತಂತ್ರವಾಗಿ ರಚನೆಮಾಡಿ ಬೆಳಕಿಗೆ ತಂದೆನು. ಈ ಶರಣ ಸಾಹಿತ್ಯಕ್ಕೆ ಮೈಸೂರು ಮಹಾರಾಜರು, ಧರ್ಮಸ್ಥಳದ ಹೆಗ್ಗಡೆಯವರು, ಚಿತ್ರದುರ್ಗ, ನಿಡಸೋಸಿ, ಸಿರಿಗೆರೆ, ಸಿದ್ಧಗಂಗಾ, ಧಾರವಾಡ ಮುರಘಾಮಠ, ಸುತ್ತೂರು, ಕನಕಪುರ, ಕಾಶಿ, ಕೇದಾರ, ಶ್ರೀಶೈಲ, ಕಲ್ಬುರ್ಗಿ, ಹುಬ್ಬಳ್ಳಿ ಮೊದಲಾದ ಪೀಠಾಧಿಪತಿಗಳೂ, ಧರ್ಮಪ್ರಕಾಶ ಎನ್. ರುದ್ರಯ್ಯನವರು, ಬಿ.ಎಂ. ಶ್ರೀನಿವಾಸಯ್ಯನವರು, ಎಂ.ಎಸ್. ರಾಮಯ್ಯನವರು, ಕಂಟ್ರಾಕ್ಟರ್ ಮರಿಸ್ವಾಮಪ್ಪನವರು, ಡಿ.ಆರ್. ಮಾಧವಕೃಷ್ಣಯ್ಯನವರು ಮೊದಲಾದ ಉದಾರಿಗಳು ಉದಾರವಾಗಿ ಸಹಾಯಮಾಡಿದ್ದಾರೆ. ಇವರೆಲ್ಲರ ಸಹಾಯ ಸಹಕಾರ ಸಹಾನುಭೂತಿಯಿಂದ ೩೫ ವರ್ಷಗಳ ಕಾಲ ಅವಿಚ್ಛಿನ್ನವಾಗಿ ಶರಣ ಸಾಹಿತ್ಯವನ್ನು ನಡೆಸಿದೆನು.” (ಜೀವನ ಸ್ಮೃತಿಗಳು, ಪುಟ. ೧೩ - ೧೪)

ಪತ್ರಿಕೆಗಳ ಪ್ರಕಟಣೆಯನ್ನು ನಿಲ್ಲಿಸಿದ ಶಾಸ್ತ್ರಿಗಳ ಪರಿಸ್ಥಿತಿಯ ಅನಾನುಕೂಲದಿಂದ ಸ್ವತಂತ್ರ ಕರ್ಣಾಟಕ ಮುದ್ರಾಣಾಲಯವನ್ನು ೧೯೭೨ರಲ್ಲಿ ಮಾರಾಟ ಮಾಡಿದರು. ಇವೆಲ್ಲಕ್ಕೂ ಮೂರು ಮುಖ್ಯಕಾರಣಗಳು ಎಂದಿದ್ದಾರೆ ಶಾಸ್ತ್ರಿಗಳು.

೧. ಮುದ್ರಣಾಲಯ ಮತ್ತು ಪತ್ರಿಕೆಗಳ ವಿಚಾರದಲ್ಲಿ ನನಗೆ ಏನೇನೂ ಅನುಭವವಿಲ್ಲದುದು.

೨. ನಾನು ಕೈಗೊಂಡ ಕಾರ್ಯದಲ್ಲಿ ನನಗೆ ಬೆಂಬಲವೀಯುವ ಜನ ಸ್ವಕೀಯವಾಗಿ ಯಾರೂ ಇಲ್ಲದುದು.

೩. ಈ ಕಾರ್ಯವನ್ನು ಪ್ರಾರಂಭಿಸುವಾಗ ನನ್ನಲ್ಲಿ ತಕ್ಕಷ್ಟು ಬಂಡವಾಳವಿಲ್ಲದುದು.

ನಾನು ಬೆಳಗಾದರೆ ಏಕೀಕರಣಕ್ಕಾಗಿ ಅಥವಾ ಮತ್ತಾವ ಸಾರ್ವಜನಿಕರ ಕಾರ್ಯಕ್ಕಾಗಿ ಊರೂರು ಸಂಚಾರ ಕೈಕೊಳ್ಳುತ್ತಿದ್ದಾಗ ನಮ್ಮ ಕಾರ್ಯಾಲಯವನ್ನು ನೋಡಿಕೊಳ್ಳುವ ಸ್ವಕೀಯರು ಯಾರೂ ಮನೆಯಲ್ಲಿ ಇಲ್ಲದ್ದರಿಂದಲೂ ನಾನು ಕೈಗೊಂಡ ಈ ಕಾರ್ಯಗಳಲ್ಲಿ ಅಪಜಯವನ್ನು ಪಡೆಯಬೇಕಾಯಿತು. ಮುದ್ರಣಾಲಯವು ಒಬ್ಬ ಜೀವಂತ ರಾಕ್ಷಸನಿದ್ದ ಹಾಗೆ. ಬೆಳಗಾದರೆ ಅದಕ್ಕೆ ಸಾಮಾನುಗಳನ್ನು ಒದಗಿಸಿಕೊಡುವುದು, ಇರುವ ಸಾಮಾನುಗಳನ್ನು ಕಳ್ಳರಿಂದ ಕಾಪಾಡಿಕೊಳ್ಳುವುದು ಇವು ಬಹುಮುಖ್ಯವಾದ ಕಾರ್ಯಗಳು. ನನ್ನ ಮುದ್ರಣಾಲಯದಲ್ಲಿ ಕೆಲಸ ಮಾಡುತ್ತಿದ್ದವರು ಹಲವರು ಮುದ್ರಣಾಲಯವನ್ನು ತಾವೇ ಸ್ವಂತವಾಗಿ ಸ್ಥಾಪಿಸಿಕೊಂಡರು. ಅಲ್ಲಿ ನಮ್ಮ ಮುದ್ರಣಾಲಯದ ಕೆಲವು ಸಾಮಾನುಗಳನ್ನು ಕಾಣಬಹುದಾಗಿತ್ತು. ಹೀಗಾದುದಕ್ಕೆ ನಾನು ಒಬ್ಬಂಟಿಗನಾಗಿದ್ದುದೂ ಸಹಾಯಕರಿಲ್ಲದುದೂ ಬಂದ ಸಹಾಯಕರು ಕೆಲವರು ಶುದ್ಧಕಳ್ಳರಾದುದೂ ನಾನು ಆಗಾಗ್ಯೆ ಪರಸ್ಥಳಗಳಿಗೆ ಸಂಚಾರ ಹೋಗುತ್ತಿದ್ದುದೂ ಈ ಪರಿಸ್ಥಿತಿಗೆ ಕಾರಣ. ಇವೆಲ್ಲಕ್ಕೂ ಹೆಚ್ಚಾಗಿ ಮುದ್ರಾಣಾಲಯದ ಅನುಭವವಿಲ್ಲದಿರುವ ನಾನು ಈ ಕಾರ್ಯವನ್ನು ಪ್ರಾರಂಭಿಸಿದುದು ಕೇವಲ ಉತ್ಸಾಹದಿಂದ ಮಾತ್ರ. ಒಂದು ಕಾರ್ಯ ಜಯವಾಗಬೇಕಾದರೆ ಆ ಕಾರ್ಯದ ಉತ್ಸಾಹದ ಜೊತೆಗೆ ಅನುಭವವೂ ಬೇಕು ಎಂಬುದು ಈಗ ನನಗೆ ಅರ್ಥವಾಗುತ್ತಿದೆ. ಊರು ಕೊಳ್ಳೇಹೋದ ಮೇಲೆ ಕೋಟೆಬಾಗಿಲು ಹಾಕಿದ ಹಾಗೆ ಎಂಬ ಗಾದೆ ನೆನಪಾಗುತ್ತಿದೆ.

ಈ ಸಂದರ್ಭದಲ್ಲಿ ನನ್ನ ಒಂದು ಅನುಭವವನ್ನು ಇಲ್ಲಿ ಬರೆಯಬಹುದು. ಒಬ್ಬ ಕಂಪಾಜಿಟರು ಒಂದ ದಿನ ಬೆಳಗ್ಯೆ ಕಣ್ಣೀರು ಸುರಿಸುತ್ತಾ ನಮ್ಮ ಕಾರ್ಯಾಲಯಕ್ಕೆ ಬಂದನು. ಆಗ ನಾನು ಅವನನ್ನು ನೋಡಿ ಏನಪ್ಪ ಏನ್ ಸಮಾಚಾರ ಎಂದು ಕೇಳಿದೆನು. ಅದಕ್ಕೆ ಅವನು ನನ್ನ ಹೆಂಡ್ತಿ ಆಸ್ಪತ್ರೆಯಲ್ಲಿ ಸಾಯುವ ಸ್ಥಿತಿಯಲ್ಲಿದ್ದಾಳೆ ಅವಳಿಗೆ ಔಷಧಿ ತರಲು, ಇಂಜೆಕ್ಷನ್ ಕೊಡಿಸಲು ನನಗೆ ಜರೂರು ೨೫ ರೂ.ಗಳು ಬೇಕು. ತಾವು ದಯವಿಟ್ಟು ಕೊಟ್ಟು ನನ್ನ ಹೆಂಡ್ತಿ ಪ್ರಾಣ ಉಳಿಸಬೇಕು ಎಂದು ಬೇಡಿಕೊಂಡನು. ಆಗ ನನ್ನ ಮನಸ್ಸು ಕರಗಿ ಅವನಿಗೆ ೨೫ ರೂ.ಗಳನ್ನು ಕೊಟ್ಟೆನು. ಅದನ್ನು ತೆಗೆದುಕೊಂಡು ನಾಳೆ ಕೆಲಸಕ್ಕೆ ಬರುತ್ತೇನೆಂದು ಹೇಳಿ ಹೋದ ಮನುಷ್ಯ ನಮ್ಮ ಕೆಲಸಕ್ಕೆ ಬರಲೇ ಇಲ್ಲ. ಆಗ ನನಗೆ ಅನುಮಾನ ಬಂದು ಅವನು ಕೊಟ್ಟಿದ್ದ. ಮನೆ ವಿಳಾಸದ ಪ್ರಕಾರ ಅವನ ಮನೆಗೆ ಹೋದೆನು. ಅವನು ಇಸ್ಪೀಟಾಡಿಕೊಂಡು ಕುಳಿತಿದ್ದ. ಅವನ ಹೆಂಡ್ತಿ ಎಲ್ಲರಿಗೂ ಕಾಫಿ ಮಾಡಿಕೊಡುತ್ತಿದ್ದಳು. ಆಗ ನಾನು ಅವನನ್ನು ಏನಪ್ಪ ಏತಕ್ಕಾಗಿ ಕೆಲಸಕ್ಕೆ ಬರಲಿಲ್ಲವೆಂದು ಕೇಳೀದೆನು. ಅದಕ್ಕೆ ಅವನು ನನಗೆ ಸಂಸಾರ ತಾಪತ್ರಯ. ಬೇರೆ ಮುದ್ರಣಾಲಯದಲ್ಲಿ ಮುಂಗಡ ಪಡೆದಿದ್ದೇನೆ. ಇನ್ನು ನಿಮ್ಮ ಪ್ರೆಸ್ಸಿಗೆ ಬರುವುದಿಲ್ಲವೆಂದು ಹೇಳಿದನು. ಆಗ ನಾನು ಕೊಟ್ಟಿರುವ ೨೫ ರೂಗಳನ್ನು ವಾಪಸ್ಸುಕೊಡು ಎಂದು ಕೇಳಿದೆನು. ಅದಕ್ಕೆ ಅವನು ನನಗೆ ಅನುಕೂಲವಾದಾಗ ಕೊಡುತ್ತೇನೆ. ನೀವು ನನ್ನ ಮನೆಯ ಹತ್ತಿರ ಬರಬಾರದು ಎಂದು ಹೇಳಿದನು. ಆಗ ನಾನು ಅವನ ಹೆಂಡತಿಗೆ ವಿಷಯವನ್ನು ಹೇಳಿದಾಗ ಆಕೆ ಸ್ವಾಮಿ ನಿಮಗೆ ದುಡ್ಡು ಹೆಚ್ಚಾಗಿದೆ ಕೇಳಿದ ಕೂಡಲೆ ಪೂರ್ವಾಪರ ವಿಚಾರ

ಮಾಡದೆ ಹಣವನ್ನು ಕೊಟ್ಟು ಬಿಡುತ್ತೀರಿ. ಹಣದ ಬೆಲೆ ನಿಮಗೆ ಗೊತ್ತಿಲ್ಲವೆಂದು ಕಾಣುತ್ತದೆ. ನಾನೇನು ಮಾಡಲಿ ಎಂದು ಹೇಳಿ ಒಳಗೆ ಹೊರಟು ಹೋದಳು. ಆಗ ನಾನು ನಿರುಪಾಯವಾಗಿ ಬಂದ ದಾರಿಗೆ ಸುಂಕವಿಲ್ಲವೆಂದು ಹಿಂತಿರುಗಿ ಬಂದೆನು." (ಜೀವನ ಸ್ಮೃತಿಗಳು, ಪುಟ.೨೧ - ೨೨)

**೧೦. ವಿಜಯನಗರ ಸಾಮ್ರಾಜ್ಯ ಮಹೋತ್ಸವ**

ವಿಜಯನಗರ ಸಾಮ್ರಾಜ್ಯ ಮಹೋತ್ಸವದ ೬೦೦ನೆಯ ವರ್ಷದ ಉತ್ಸವ ಹಂಪೆಯಲ್ಲಿ ೧೯೩೬ರಲ್ಲಿ ವೈಭವದಿಂದ ನಡೆಯಿತು. ಶಾಸ್ತ್ರಿಗಳು ಬೇಲೂರು ಕೇಶವದಾಸರ ಜೊತೆಯಲ್ಲಿ ಮೈಸೂರು ಪ್ರಾಂತ್ಯದಲ್ಲಿ ಇದರ ಪ್ರಚಾರಕಾರ್ಯವನ್ನು ಕೈಕೊಂಡರು. ಇದಕ್ಕಾಗಿ ಸುಮಾರು ಆರು ತಿಂಗಳಕಾಲ ನಾಡಿನಲ್ಲೆಲ್ಲಾ ಸುತ್ತಾಡಿ ಸಾಕಷ್ಟು ಧನಸಂಗ್ರಹವನ್ನು ಮಾಡಿ ಧಾರವಾಡದ ಕೇಂದ್ರ ಸಮಿತಿಗೆ ಕಳಿಸಿಕೊಟ್ಟರು. ಆ ಸಮಯದಲ್ಲಿ ವಿಜಯನಗರದ ಇತಿಹಾಸ ಮತ್ತು ಸಚಿತ್ರ ವಿಜಯನಗರ ಎಂಬ ಕೃತಿಗಳು ಪ್ರಕಟವಾದುವು. ಆ ಮಹೋತ್ಸವದಲ್ಲಿ ಡಾ. ಕುರ್ತುಕೋಟಿ, ವಿ.ವಿ. ಹಾಲಭಾವಿ, ಬಿ.ಎಂ. ಶ್ರೀಕಂಠಯ್ಯ, ಡಾ. ಸಾಲತೊರೆ, ಬೆನಗಲ್ ರಾಮರಾವ್, ಸರ್ದಾರ್ ಕೆ. ಬಸವರಾಜೇ ಅರಸ್, ಪ್ರೊ. ಬಸವನಾಳ, ಡಾ. ನಂದೀಮಠ ಮೊದಲಾದವರ ಸಹಯೋಗದಲ್ಲಿ ಶಾಸ್ತ್ರಿಗಳೂ ಸಕ್ರೀಯವಾಗಿ ಭಾಗವಹಿಸಿದ್ದರು.

ಶಾಸ್ತ್ರಿಗಳ ಜೀವನದಲ್ಲಿ ಮತ್ತೊಂದು ಸ್ಮರಣೀಯ ಘಟನೆ ಈ ಸಂದರ್ಭದಲ್ಲೇ ನಡೆಯಿತು. ವಿಜಯನಗರ ಸಾಮ್ರಾಜ್ಯ ಮಹೋತ್ಸವದ ಕಾರ್ಯಕ್ರಮಗಳು ಮುಗಿದ ಮೂರನೆಯ ದಿನ ಶಾಸ್ತ್ರಿಗಳು ಡಾ. ನಂದೀಮಠ ಮತ್ತು ಬೇಲೂರು ಕೇಶವದಾಸರ ಜೊತೆ ನದಿ ಸ್ನಾನಕ್ಕಾಗಿ ವಿರೂಪಾಕ್ಷ ದೇವಸ್ಥಾನದ ಎಡಭಾಗದಲ್ಲಿರುವ ಮನ್ಮಥಾನ್ಮುಖ ಕೊಂಡ ಪ್ರದೇಶಕ್ಕೆ ಹೋದರು. ಡಾ. ನಂದೀಮಠರೂ ಕೇಶವದಾಸರೂ ನದಿಯ ದಂಡೆಯಲ್ಲೇ ಕುಳಿತು ಸ್ನಾನ ಮಾಡಿದರು. ಶಾಸ್ತ್ರಿಗಳು ಹರೆಯದ ಹುರುಪಿನಿಂದ ಈಜಾಡಲು ನದಿಗೆ ಧುಮುಕಿದರು. ಅವರಿಬ್ಬರೂ ಎಚ್ಚರಿಕೆ ಕೊಟ್ಟರೂ ಕೇಳದ ಶಾಸ್ತ್ರಿಗಳು ಈಜನ್ನು ಮುಂದುವರಿಸಿ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದರು. ಸುಸ್ತಾಗಿ ಹೋಗಿದ್ದ ಶಾಸ್ತ್ರಿಗಳು ತಮ್ಮ ಅವತಾರ ಮುಗಿಯಿತೆಂದು ಭಾವಿಸಿ ಪಂಪಾಪತಿ ಸ್ಮರಣೆ ಮಾಡುತ್ತಿದ್ದರು. ಜನರು ಹಾಹಾಕಾರ ಮಾಡುತ್ತಿದ್ದರು. ಅಮೇಲೆ ಅವರು ಒಂದು ಪಂಚೆಯನ್ನು ನದಿಗೆ ಎಸೆದು ಅದನ್ನು ಹಿಡಿದುಕೊಳ್ಳುವಂತೆ ಹೇಳಿ ಶಾಸ್ತ್ರಿಗಳನ್ನು ದಡಕ್ಕೆ ಎಳೆದು ಹಾಕಿದರು. ತಮ್ಮ ಜೀವವನ್ನು ಉಳಿಸಿದ ದೇವರು ತಮ್ಮಿಂದ ನಾಡುನುಡಿಯ ಸೇವೆ ಮಾಡಿಸಬೇಕೆಂದು ಸಂಕಲ್ಪಿಸಿದಂತಿದೆ ಎಂದ ಭಾವಿಸಿದರು. ಜೀವನದ ಉಳಿದೆಲ್ಲಾ ಸಮಯವನ್ನೂ ಈ ಕಾರ್ಯಗಳಿಗೇ ವಿನಿಯೋಗಿಸಿದರು.

**೧೧. ಕರ್ಣಾಟಕ ಏಕೀಕರಣ**

ಕರ್ಣಾಟಕ ಏಕೀಕರಣಕ್ಕೆ ಶಿವಮೂರ್ತಿಶಾಸ್ತ್ರಿಗಳು ಸಲ್ಲಿಸಿರುವ ಸೇವೆ ಎಣೆತೊಣೆಯಿಲ್ಲದ್ದು. ಸುಮಾರು ಹತ್ತು ವರ್ಷಗಳ ಕಾಲ ಅಖಂಡ ಕರ್ಣಾಟಕವನ್ನು ಸುತ್ತಿ ತಮ್ಮ ಕೀರ್ತನೆಗಳಿಂದಲೂ ಭಾಷಣಗಳಿಂದಲೂ ಜನ ಜಾಗೃತಿಯನ್ನುಂಟುಮಾಡಿದ್ದಾರೆ. ಆ ಕಾಲದ ಜನರ ಅಭಿಪ್ರಾಯವೇನಿತ್ತು ಎಂಬುದನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ತಮ್ಮ ಪತ್ರಿಕೆಗಳ ಮೂಲಕ ಕೃತಿಗಳ ಮೂಲಕ ಏಕೀಕರಣಕಾರ್ಯಕ್ಕೆ ಮಹತ್ತರವಾದ ಸೇವೆಯನ್ನು ಸಲ್ಲಿಸಿದ್ದಾರೆ. ಅವರು ಏಕೀಕರಣದ ಬಗೆಗೆ ಬರೆದಿರುವುದನ್ನೇ ಯಥಾವತ್ತಾಗಿ ಉದ್ಧರಿಸಲಾಗದೆ. "ಆಗಿನ ಕಾಲದಲ್ಲಿ ಹಳೇ ಮೈಸೂರಿನ ಜನ ಸಾಮಾನ್ಯರಲ್ಲಿ, ಕರ್ಣಾಟಕ ಏಕೀಕರಣಕ್ಕೆ ಬೆಂಬಲವಿರಲಿಲ್ಲ, ಕರ್ಣಾಟಕವಾದರೆ ನಮ್ಮ ಮೈಸೂರು ಮಹಾರಾಜರು ಹೋಗುತ್ತಾರೆ. ಮೈಸೂರು ಪ್ರಾಮುಖ್ಯತೆ ಹೋಗುತ್ತದೆ. ಲಿಂಗಾಯಿತರು ಪ್ರಭಾವಿತರಾಗುತ್ತಾರೆ ಎಂಬ ಅಂಜಿಕೆ ಕೆಲ ಜನರಲ್ಲಿ ಬಹಳವಾಗಿತ್ತು. ಆಗ ಕನ್ನಡ ಸಾಹಿತ್ಯ ಪರಿಷತ್ತಿನವರು ಕೂಡ ಈ ಕಾರ್ಯಕ್ಕೆ ಮುಂದುಬಂದಿರಲಿಲ್ಲ. ಅದಕ್ಕೆ ಕಾರಣ ಮೈಸೂರಿನಲ್ಲಿ ಈ ವಿಷಯದಲ್ಲಿ ಆಸಕ್ತಿ ಇಲ್ಲವೆಂಬುದು. ಅದೇ ಕಾಲದಲ್ಲಿ ಬೆನಗಲ್ ರಾಮರಾಯರು ಎನ್. ಬಾಲಕೃಷ್ಣಯ್ಯನವರು ಟಿ. ಸಿದ್ಧಲಿಂಗಯ್ಯನವರು ನಾನೂ ಸೇರಿ ೧೯೩೮ರಲ್ಲಿ ಕರ್ಣಾಟಕ ಏಕೀಕರಣ ಸಂಘವನ್ನು ಸ್ಥಾಪಿಸಿದೆವು. ಅದಕ್ಕೆ ಬೆನಗಲ್ ರಾಮರಾಯರು ಅಧ್ಯಕ್ಷರಾಗಿಯೂ ಎನ್. ಬಾಲಕೃಷ್ಣಯ್ಯನವರು ಉಪಾಧ್ಯಕ್ಷರಾಗಿಯೂ ಟಿ. ಸಿದ್ಧಲಿಂಗಯ್ಯನವರು ಕೋಶಾಧಿಕಾರಿಗಳಾಗಿಯೂ ನಾನು ಕಾರ್ಯದರ್ಶಿಯಾಗಿಯೂ ಚುನಾಯಿತರಾದೆವು. ಈ ಸಂಘದ ಪ್ರಾರಂಭೋತ್ಸವವನ್ನು ಹಿರಿಯ ಸಾಹಿತಿಗಳೊಬ್ಬರಿಂದ

ನೆರವೇರಿಸಬೇಕೆಂದು ತೀರ್ಮಾನಿಸಿ ಆ ಸಾಹಿತಿಗಳೊಬ್ಬರ ಮನೆಗೆ ಬೆನಗಲ್ ರಾಮರಾಯರೂ ಮತ್ತು ನಾನೂ ಸಹ ಅವರ ಮನೆಗೆ ಹೋಗಿ ಅವರಲ್ಲಿ ಈ ಸಂಘದ ಪ್ರಾರಂಭೋತ್ಸವವನ್ನು ತಾವು ನಡೆಸಿಕೊಡಬೇಕೆಂದು ಕೇಳಿಕೊಂಡೆವು. ಅದಕ್ಕೆ ಹಿರಿಯರಾದ ಅವರು ಐದು ನಿಮಿಷ ಸುಮ್ಮನಿದ್ದು ನಾನು ಬರಲು ಸಾಧ್ಯವಿಲ್ಲ. ಈ ತತ್ವದಲ್ಲಿ ನನಗೆ ನಂಬಿಕೆಯಿಲ್ಲ ಎಂದು ಸ್ಪಷ್ಟವಾಗಿ ಹೇಳಿಬಿಟ್ಟರು. ಹಳೇ ಮೈಸೂರು ಈಗಿನಂತೆ ಇದ್ದರೆ ಇದು ಒಕ್ಕಲಿಗರ ರಾಜ್ಯ. ಕರ್ಣಾಟಕ ಪ್ರಾರಂಭವಾದರೆ ಅದು ಲಿಂಗಾಯಿತರ ರಾಜ್ಯವಾಗುತ್ತದೆ. ಬ್ರಾಹ್ಮಣರಾದ ನಮಗೂ ನಿಮಗೂ ಚಳುವಳಿ ಏತಕ್ಕೆ? ಬಿ. ಶಿವಮೂರ್ತಿಶಾಸ್ತ್ರಿಗಳು ಲಿಂಗಾಯಿತರು. ಆದ್ದರಿಂದ ಅವರು ಈ ವಿಷಯದಲ್ಲಿ ಆಸಕ್ತಿ ವಹಿಸಿರುವುದು ಅರ್ಥಪೂರ್ಣವಾಗಿದೆ ಎಂದು ಅಪ್ಪಣೆ ಕೊಡಿಸಿದರು. ಆಗ ಹಿರಿಯರಾದ ಬೆನಗಲ್ ರಾಮರಾಯರು ಸ್ವಾಮಿ ತಾವು ಬಹುದೊಡ್ಡ ವಿದ್ವಾಂಸರು, ಜ್ಞಾನ ವೃದ್ಧರು, ತಮ್ಮ ಮೇಲೆ ನನಗೆ ಬಹಳ ಗೌರವವಿದೆ. ಕನ್ನಡ ಅಭಿವೃದ್ಧಿಗಾಗಿ ಬಹಳ ಕೆಲಸ ಮಾಡಿದ್ದೀರಿ, ಅನೇಕ ಸಮ್ಮೇಳನಗಳಲ್ಲಿ ಕರ್ಣಾಟಕಕ್ಕೆ ಬೆಂಬಲ ಕೊಟ್ಟು ಮಾತಾಡಿದ್ದೀರಿ, ಮೈಸೂರು ಸೇರದ ಹೊರತು ಕರ್ಣಾಟಕ ಏಕೀಕರಣ ಆಗುವುದಿಲ್ಲ. ಆದ್ದರಿಂದ ನಾವು ಬೆಂಗಳೂರಿನಲ್ಲಿ ಅದಕ್ಕಾಗಿ ಒಂದು ಸಂಘ ಸ್ಥಾಪಿಸಿದ್ದೇವೆ. ತಮ್ಮಿಂದ ಉದ್ಘಾಟನೆಯಾದರೆ ಅದಕ್ಕೆ ಹೆಚ್ಚು ಬೆಲೆ ಬರುತ್ತದೆಂದು ನಾವಿಲ್ಲಿಗೆ ಬಂದೆವು. ತಾವು ಹೇಳುವುದನ್ನು ಕೇಳಿ ನಮಗೆ ಬಹಳ ಆಶ್ಚರ್ಯವಾಗಿದೆ. ಯಾವ ರಾಜ್ಯದಲ್ಲಿ ಯಾರು ಅಧಿಕ ಸಂಖ್ಯಾತರಾಗಿರುವರೋ ಅವರು ಅಧಿಕಾರಕ್ಕೆ ಬರುವುದು ಪ್ರಜಾಪ್ರಭುತ್ವದಲ್ಲಿ ಕ್ರಮಪ್ರಾಪ್ತವಾಗಿದೆ. ಪಂಜಾಬಿನಲ್ಲಿ ಸಿಕ್ಕರೂ, ಬೊಂಬಾಯಿಯಲ್ಲಿ ಮರಾಠರೂ ಮದರಾಸಿನಲ್ಲಿ ಬ್ರಾಹ್ಮಣೇತರರೂ ಆಂಧ್ರದಲ್ಲಿ ರೆಡ್ಡಿಗಳೂ ಕರ್ಣಾಟಕದಲ್ಲಿ ಲಿಂಗಾಯಿತರೂ ಅಧಿಕ ಸಂಖ್ಯಾತರಾಗಿದ್ದಾರೆ. ಚುನಾವಣೆಯಲ್ಲಿ ಈ ಜನರೇ ಅಧಿಕಮಂದಿ ಶಾಸನ ಸಭೆ ಸದಸ್ಯರಾಗಿ ಬರಬಹುದು. ಪ್ರಜಾಪ್ರಭುತ್ವದ ಇಂದಿನ ದಿವಸಗಳಲ್ಲಿ ಒಂದು ಜಾತಿಯವರು ಎಷ್ಟು ಪ್ರಬಲರಾದರೂ ಎಲ್ಲ ಜನರ ಸಹಾಯವಿಲ್ಲದೆ ಅವರು ರಾಜ್ಯಭಾರ ಮಾಡಲು ಸಾಧ್ಯವಿಲ್ಲ.

ಕರ್ಣಾಟಕದಲ್ಲಿ ಲಿಂಗಾಯಿತರ ಸಂಖ್ಯೆ ೧/೫ ಭಾಗ ಆಗಬಹುದು. ಆದ ಮಾತ್ರಕ್ಕೆ ಅವರು ೪/೫ ಭಾಗದ ಜನಗಳ ಬೆಂಬಲ ಪಡೆಯದಿದ್ದಲ್ಲಿ ರಾಜ್ಯಭಾರಮಾಡಲು ಸಾಧ್ಯವಿಲ್ಲ. ಮುಸಲ್ಮಾನರು, ಇಂಗ್ಲಿಷರು ಮರಾಠರು ಮೊದಲಾದ ಪರಧರ್ಮೀಯರ ಮತ್ತು ಪರದೇಶೀಯರ ಅಧಿಕಾರಕ್ಕೆ ತಲೆಬಾಗಿದ ನಾವು ನಮ್ಮವರೇ ಕನ್ನಡಿಗರೇ ಆದ ಲಿಂಗಾಯಿತರ ಅಧಿಕಾರಕ್ಕೆ ಒಳಪಟ್ಟರೂ ಅದರಿಂದ ನಮಗೆ ಬಾಧಕವಿಲ್ಲ. ಸ್ವತಂತ್ರವನ್ನೂ ಪ್ರಜಾಪ್ರಭುತ್ವವನ್ನೂ ಬಯಸುವ ನಾವು ಇಂತಹ ಸಂದರ್ಭದಲ್ಲಿ ನಮ್ಮ ಮನಸ್ಸನ್ನು ಕೊಂಚ ದೊಡ್ಡದು ಮಾಡಿಕೊಳ್ಳಬೇಕು. ಒಳ್ಳೆಯದು ಆದರೂ ನಮ್ಮ ಪ್ರಯತ್ನಕ್ಕೆ ನಿಮ್ಮ ಬೆಂಬಲವಿರಬೇಕು ಎಂಬುದೇ ನಮ್ಮ ಅಪೇಕ್ಷೆ. ತೊಂದರೆ ಕೊಟ್ಟಿದ್ದಕ್ಕೆ ಕ್ಷಮಿಸಿ, ನಮಸ್ಕಾರ ಎಂದು ಹೇಳಿ ಮೇಲಕ್ಕೆದ್ದರು. ಇದು ೧೯೩೮ರಲ್ಲಿ ನಡೆದ ವಿಷಯ. ಆಗ ಇನ್ನೂ ಬೆಂಗಳೂರಿಗೆ ರಿಕ್ಷಾ ಬಂದಿರಲಿಲ್ಲ. ಆದ್ದರಿಂದ ನಾನೂ ರಾಮರಾಯರೂ ಒಂದು ಜಟಕಾ ಮಾಡಿಕೊಂಡು ಹೋಗಿದ್ದೆವು. ಬಂದ ದಾರಿಗೆ ಸುಂಕವಿಲ್ಲ ಎಂದು ನಿರಾಶೆಯನ್ನು ಹೊತ್ತು ಬಂದೆವು.

ಆಗಿನ ಕಾಲದಲ್ಲಿ ಹಳೇ ಮೈಸೂರಿನಲ್ಲಿ ಸರ್ಕಾರಕ್ಕಾಗಲಿ ಜನರಲ್ಲಾಗಲಿ ಕರ್ಣಾಟಕ ಏಕೀಕರಣಕ್ಕೆ ಬೆಂಬಲವಿರಲಿಲ್ಲ. ಆದರೆ ಕರ್ಣಾಟಕದ ಧುರೀಣರಾದ ಆಲೂರ ವೆಂಕಟರಾಯರು, ಡಿ.ಪಿ. ಕರಮರಕರ್‌ರವರು, ಕಡಪ ರಾಘವೇಂದ್ರರಾಯರು, ದಾತಾರ್ ಬಲವಂತರಾಯರು, ಡಾ. ನಾಗನಗೌಡರು ಮೊದಲಾದ ಹಿರಿಯರು ಹಳೇ ಮೈಸೂರಿಗೆ ಬಂದಾಗ ಈ ವಿಷಯವನ್ನು ಕುರಿತು ಎಲ್ಲಾ ಕಡೆಯೂ ಹೇಳುತ್ತಿದ್ದರು. "ಕರ್ಣಾಟಕ ಏಕೀಕರಣದಿಂದಲೇ ಕನ್ನಡಿಗರಿಗೆ ಮುಕ್ತಿಯೆಂದು" ಸ್ಪಷ್ಟವಾಗಿ ಪ್ರತಿಪಾದಿಸುತ್ತಿದ್ದರು. (ಜೀವನ ಸ್ಮೃತಿಗಳು, ಪುಟ. ೧೩ - ೧೫)

**೧೭. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆ**

ಶಿವಮೂರ್ತಿ ಶಾಸ್ತ್ರಿಗಳ ಜೀವನದ ಅತ್ಯಂತ ಮಹತ್ವದ ಸಾಧನೆಯೆಂದರೆ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದು. ಶ್ರೀಯುತರು ೧೯೫೬ರಿಂದ ೧೯೬೪ರ ವರೆಗೆ ಪರಿಷತ್ತಿನ ಅಧ್ಯಕ್ಷರಾಗಿ ಅದರ ಸರ್ವಾಂಗೀಣ ಪ್ರಗತಿಗಾಗಿ ನಿರಂತರವಾಗಿ ದುಡಿದಿದ್ದಾರೆ. ಶಾಸ್ತ್ರಿಗಳು ಪರಿಷತ್ತಿನ ಅಧ್ಯಕ್ಷರಾಗುವುದಕ್ಕಿಂತ ಮೊದಲು ಪರಿಷತ್ತಿನ ಆಜೀವ ಸದಸ್ಯರಾಗಿದ್ದರು. ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರು. ಅಲ್ಲದೆ ಕೆಲಕಾಲ ಪರಿಷತ್ತಿನ ಪತ್ರಿಕೆಗಳಾದ ಕನ್ನಡ ನುಡಿ, ಕನ್ನಡ ಸಾಹಿತ್ಯ

ಪರಿಷತ್ಪತ್ರಿಕೆಗಳ ಸಂಪಾದಕರಾಗಿಯೂ ಕೆಲಸಮಾಡಿದ್ದಾರೆ. ಸುಮಾರು ಎಂಟು ವರ್ಷಗಳ ಕಾಲ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಆ ಕಾಲದಲ್ಲಿ ಜನಬಲ ಧನಬಲವಿಲ್ಲದಿದ್ದರೂ ಅವರು ಪರಿಷತ್ತಿನ ಎಲ್ಲ ಕಾರ್ಯಗಳನ್ನು ಸಾಂಗೋಪಾಂಗವಾಗಿ ಮಾಡಿದ್ದಾರೆ. ಅನೇಕ ಅಪ್ರಕಟಿತ ಪ್ರಾಚೀನ ಕೃತಿಗಳು ಬೆಳಕು ಕಂಡದ್ದು ಇವರ ಕಾಲದಲ್ಲೇ. ಕನ್ನಡ ಸಾಹಿತ್ಯ ಪರಿಷತ್ತಿಗೆ ಶಾಶ್ವತ ಕೀರ್ತಿಯನ್ನು ತಂದುಕೊಟ್ಟಿರುವ ಕನ್ನಡ ನಿಘಂಟಿಗೆ ಒಂದು ಭದ್ರವಾದ ಬುನಾದಿಯನ್ನು ಹಾಕಿಕೊಟ್ಟವರು ಶಾಸ್ತ್ರಿಗಳು. ನಿಘಂಟು ಕಾರ್ಯಕ್ಕೆ ಸರ್ಕಾರದಿಂದ ವಿಶೇಷ ಆರ್ಥಿಕ ನೆರವನ್ನು ಒದಗಿಸಿದ "ಪರಿಷತ್ತಿಗೂ ಸರ್ಕಾರಕ್ಕೂ ಕರಾರು" ಆದದ್ದು ಶಾಸ್ತ್ರಿಗಳ ಕಾಲದಲ್ಲಿ. ನಿಘಂಟಿನ ಮುದ್ರಣಕ್ಕಾಗಿ ಸರ್ಕಾರದಿಂದ ಅತ್ಯಾಧುನಿಕ ಹೊಸ ಮುದ್ರಣ ಯಂತ್ರವನ್ನು ದೊರಕಿಸಿಕೊಟ್ಟರು. ಇದಕ್ಕಾಗಿ ಪರಿಷತ್ತಿನ ಬಿ.ಎಂ.ಶ್ರೀ. ಅಚ್ಚುಕೂಟವನು ವಿಸ್ತರಿಸಿದರು. ಕರ್ನಾಟಕದ ಪ್ರಮುಖ ನಗರಗಳಾದ ಬೀದರ, ಬಳ್ಳಾರಿ, ಗದಗ, ಧಾರವಾಡ, ಉಡುಪಿ, ಸಿದ್ಧಗಂಗೆಗಳಲ್ಲಿ ಸಾಹಿತ್ಯ ಸಮ್ಮೇಳನಗಳನ್ನು ನಡೆಸಿದ್ದಾರೆ. ಭಾರತದ ರಾಷ್ಟ್ರಪತಿಗಳಾಗಿದ್ದ ಡಾ. ರಾಜೇಂದ್ರ ಪ್ರಸಾದ್ ಅವರನ್ನು ೧೯೫೮ರಲ್ಲೂ ಡಾ. ರಾಧಾಕೃಷ್ಣನು ಅವರನ್ನು ೧೯೬೩ರಲ್ಲೂ ಕನ್ನಡ ಸಾಹಿತ್ಯ ಪರಿಷತ್ತಿಗೆ ಬರಮಾಡಿಕೊಂಡು ಗೌರವಿಸಿದ್ದಾರೆ.

**೧೩. ಸಾಹಿತ್ಯ ಸೇವೆ**

ಶಿವಮೂರ್ತಿಶಾಸ್ತ್ರಿಗಳ ಎಲ್ಲ ಸಾಧನೆ ಸಿದ್ಧಿಗಳಿಗೆ ಮಕುಟಪ್ರಾಯವಾದುದು ಅವರು ಸಲ್ಲಿಸಿದ ಸಾಹಿತ್ಯ ಸೇವೆಯೆಂಬುದು ನಿರ್ವಿವಾದವಾದುದು. ಶ್ರೀಯುತರು ಕವಿಯಾಗಿ ನಾಟಕಕಾರರಾಗಿ, ಪ್ರಾಚೀನ ಕಾವ್ಯಗಳ ಸಂಪಾದಕರಾಗಿ, ಸಂಶೋಧಕರಾಗಿ, ಶಾಸನತಜ್ಞರಾಗಿ, ವಿಮರ್ಶಕರಾಗಿ ಐವತ್ತಕ್ಕೂ ಮಿಕ್ಕು ಕೃತಿಗಳನ್ನು ಪ್ರಕಟಿಸಿದ್ದಾರೆ. ನೂರಾರು ಬಿಡಿ ಲೇಖನಗಳನ್ನೂ ಬರೆದಿದ್ದಾರೆ. ಶಾಸ್ತ್ರಿಗಳು ಕನ್ನಡ ಮತ್ತು ಸಂಸ್ಕೃತ ಉಭಯ ಭಾಷೆ ವಿಶಾರದರಾದುದರಿಂದ ಕನ್ನಡ ಮತ್ತು ಸಂಸ್ಕೃತ ಪ್ರಾಚೀನ ಕೃತಿಗಳನ್ನು ಸಂಪಾದಿಸಿದ್ದಾರೆ. ಅಷ್ಟೇ ಅಲ್ಲ ಈ ಎರಡು ಭಾಷೆಗಳಲ್ಲೂ ಆಧುನಿಕ ಕವಿತೆಗಳನ್ನೂ ಪ್ರಶಸ್ತಿ ಮನವಿ ಪತ್ರಗಳನ್ನು ಬರೆದಿದ್ದಾರೆ.

ಪ್ರಸ್ತುತ ಶಾಸ್ತ್ರಿಗಳು ಬರೆದಿರುವ ಸಂಪಾದಿಸಿರುವ ಕೆಲವು ಕೃತಿಗಳ ಸ್ಥೂಲ ಪರಿಚಯವನ್ನು ಮಾಡಲಾಗಿದೆ. ದುಂಬಿ ಮತ್ತು ನಾದ, ಗಾಂಧೀ ಗೀತೆಗಳು ಕವನ ಸಂಕಲನಗಳು. ಮಹಾತ್ಮಗಾಂಧಿ ಅವರು ೧೯೨೭ರಲ್ಲಿ ತುಮಕೂರಿಗೆ ಬಂದಿದ್ದಾಗ ಗಾಂಧೀ ಗೀತೆಗಳು ಎಂಬ ಕವನಗಳನ್ನು ರಚಿಸಿ ಅವರಿಗೆ ಶಾಸ್ತ್ರಿಗಳು ಅರ್ಪಿಸಿದರು. ಇದೇ ರೀತಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ೧೯೨೭ರಲ್ಲಿ ತುಮಕೂರಿಗೆ ಆಗಮಿಸಿದ್ದಾಗ ಶಾಸ್ತ್ರಿಗಳು ಸ್ವಾಗತ ಸಮಿತಿಯ ಪರವಾಗಿ 'ನಾಲ್ವಡಿ ಕೃಷ್ಣರಾಜ ವಿಳಾಸಂ' ಎಂಬ ಚಂಪೂಕಾವ್ಯವನ್ನು ಬರೆದು ಸಭೆಯಲ್ಲಿ ಓದಿ ಮಹಾರಾಜರ ಮೆಚ್ಚುಗೆಗೆ ಪಾತ್ರರಾದರು. ಕೆಳದಿ ರಾಣಿಚೆನ್ನಮ್ಮಾಜಿ ಮತ್ತು ಕರ್ಣಾಟಕ ವಿಜಯ ಇವು ಎರಡೂ ನಾಟಕಗಳು. ನಿಜಗುಣರ ಪುರಾತನ ತ್ರಿವಿಧಿ, ರಾಘವಾಂಕನ ವೀರೇಶ ಚರಿತೆ, ಕೊಂಡಗುಳಿ ಕೇಶಿರಾಜನ ಷಡಕ್ಷರ ಮಂತ್ರಮಹಿಮೆ, ಗುರುಸಿದ್ಧನ ಮಾದೇಶ್ವರ ಸಾಂಗತ್ಯ ಇವು ಸಂಪಾದಿತ ಕೃತಿಗಳು. ಪ್ರಾಚೀನ ಕೃತಿಗಳನ್ನು ಹಸ್ತಪ್ರತಿಗಳ ಆಧಾರದಿಂದ ಶಾಸ್ತ್ರೀಯವಾಗಿ ಸಂಪಾದಿಸುವುದು ಬಹುಕಷ್ಟದ ಕೆಲಸ. ಶಾಸ್ತ್ರಿಗಳು ಈ ಕಾರ್ಯವನ್ನೂ ಮಾಡಿ ಕೀರ್ತಿಯನ್ನು ಗಳಿಸಿದ್ದಾರೆ.

**ಷಡಕ್ಷರ ಮಂತ್ರ ಮಹಿಮೆ :** ಕೊಂಡಗುಳಿ ಕೇಶಿರಾಜ ದಂಡನಾಯಕ ವಿರಚಿತ ಷಡಕ್ಷರ ಮಂತ್ರಮಹಿಮೆ ವೀರಶೈವ ಸಾಹಿತ್ಯದಲ್ಲಿ ಅತ್ಯಂತ ಮಹತ್ವದ ಕೃತಿ. ಕ್ರಿ.ಶ. ೧೦೭೬ ರಿಂದ ೧೧೨೬ರ ವರೆಗೆ ರಾಜ್ಯವಾಳಿದ ಚಾಲುಕ್ಯ ವಿಕ್ರಮಾದಿತ್ಯನ ದಂಡನಾಯಕನಾಗಿದ್ದ ಕೊಂಡಗುಳಿ ಕೇಶಿರಾಜ ಈ "ಷಡಕ್ಷರ ಕಂದ"ವನ್ನು ಬರೆದಿದ್ದಾನೆ. ಈತನು ಕೊಂಡಗುಳಿಯಲ್ಲಿ ಸೋಮೇಶ್ವರ ದೇವಸ್ಥಾನವನ್ನು ಕಟ್ಟಿಸಿ ಒಂದು ಶಿಲಾಶಾಸನವನ್ನು ಹಾಕಿಸಿದ್ದಾನೆ. ಅದರಲ್ಲಿ ಮಹಾಸಾಮಂತಾಧಿಪತಿ, ಪ್ರಚಂಡ ದಂಡನಾಯಕ, ಸುಕವಿ ಶುಕಚೂತಬಂಧುವನ ವಸಂತ, ವಚಶ್ರೀ ವಧೂಕಾಂತ, ಸಾಹಿತ್ಯ ಸರೋರುಹ ಮಧುಬ್ರತ, ಸತ್ಯಬ್ರತ, ಹರಚರಣ ರಂಜಿತೋತ್ತಮಾಂಗ, ಸಂಧಿವಿಗ್ರಹಿ ಎಂದು ಮುಂತಾಗಿ ಉಲ್ಲೇಖಗೊಂಡಿದ್ದಾನೆ.

ಷಡಕ್ಷರ ಕಂದದಲ್ಲಿ ೧೧೦ ಕಂದಪದ್ಯಗಳಿವೆ. ಈ ಗ್ರಂಥಕ್ಕೆ "ಮಂತ್ರ ಮಹತ್ವದ ಕಂದ" ಎಂಬ ಹೆಸರೂ ಉಂಟು. 'ಓಂ ನಮಃ ಶಿವಾಯ' ಎಂಬ ಷಡಕ್ಷರಿ ಮಂತ್ರದ ಮಹಿಮೆಯನ್ನು ಈ ಕೃತಿಯಲ್ಲಿ ವಿವರಿಸಿದೆ. ಈ ಕಿರುಕೃತಿಯನ್ನು ಶಾಸ್ತ್ರೀಯವಾಗಿ ಸಂಪಾದಿಸಿರುವುದೇ ಅಲ್ಲದೆ ಷಡಕ್ಷರ ಮಂತ್ರ ಮಹಿಮೆಯ ತಾತ್ಪರ್ಯ ಸಂಗ್ರಹವನ್ನು ಮಾಡಿಕೊಟ್ಟಿದ್ದಾರೆ. ಇದರ ಜೊತೆಗೆ ಹರಿಹರ ವಿರಚಿತ ಕೊಂಡಗುಳಿ ಕೇಶಿರಾಜ

ರಗಳೆಯನ್ನು ಆತನ ಇತಿವೃತ್ತಗಳನ್ನೂ ಪ್ರಾಚೀನ ಗ್ರಂಥಗಳಲ್ಲಿನ ಮಾಹಿತಿಗಳನ್ನೂ ಶಾಸನ ಕಾವ್ಯಾಧಾರಗಳನ್ನೂ ಕೊಟ್ಟಿದ್ದಾರೆ. ಅನುಬಂಧ ೪ರಲ್ಲಿ ಶಿವಮಂತ್ರ ಮಹಿಮೆಯನ್ನು ಸಂಗ್ರಹಿಸಿ ಕೊಟ್ಟಿರುವುದಲ್ಲದೆ ಷಡಕ್ಷರ ಮಂತ್ರ ಮಹಿಮೆ ಮತ್ತು ಕೊಂಡಗುಳಿ ಕೇಶಿರಾಜ ರಗಳೆಯ ಶಬ್ದಕೋಶಗಳನ್ನೂ ಕೊಟ್ಟಿದ್ದಾರೆ. ಷಡಕ್ಷರ ಮಂತ್ರ ಮಹಿಮೆಯನ್ನು ಸಮಗ್ರವಾಗಿ ಅರಿತುಕೊಳ್ಳಲು ಅತ್ಯಂತ ಸಹಕಾರಿಯಾದುದು ಷಡಕ್ಷರ ಕಂದ.

**ಗುರುಸಿದ್ಧ ಕವಿ ವಿರಚಿತ ಮಾದೇಶ್ವರ ಸಾಂಗತ್ಯ :**ಕ್ರಿ.ಶ.ಸು. ೧೭೫೦ರಲ್ಲಿದ್ದ ಗುರುಸಿದ್ಧ ಕವಿಯ ಮಾದೇಶ್ವರ ಸಾಂಗತ್ಯವನ್ನು ಏಕೈಕ ಹಸ್ತ ಪ್ರತಿಯ ಆಧಾರದಿಂದ ಪ್ರಥಮ ಬಾರಿಗೆ ಸಂಪಾದಿಸಿ ಪ್ರಕಟಿಸಿದ್ದಾರೆ. ಮಾದೇಶ್ವರರಿಗೆ ಸಂಬಂಧಿಸಿದ ಎಲ್ಲ ಸಂಗತಿಗಳನ್ನೂ ಸಂಗ್ರಹಿಸಿದ್ದಾರೆ. ಕವಿಕಾವ್ಯ ವಿಷಯವನ್ನು ಸಮಗ್ರವಾಗಿ ನಿರೂಪಿಸಿದ್ದಾರೆ. ಶಾಸನಗಳಲ್ಲಿ ಉಕ್ತವಾದ ವಿಷಯಗಳನ್ನೂ ಜಾನಪದದಲ್ಲಿ ಪ್ರಚಲಿತವಿರುವ ಹಾಡುಗಳನ್ನೂ ಮಾದೇಶ್ವರನ ಬಗೆಗೆ ಲಬ್ಧವಿರುವ ಎಲ್ಲ ಮಾಹಿತಿಗಳನ್ನೂ ಸಂಗ್ರಹಿಸಿ ಕೊಟ್ಟಿದ್ದಾರೆ. ಅನುಬಂಧ ೧ ರಲ್ಲಿ ಮಾದೇಶ್ವರ ಸಾಂಗತ್ಯದ ಓದುಗರು ತಿಳಿದಿರಬೇಕಾದ ಸಂಗತಿಗಳನ್ನೂ ಅನುಬಂಧ ೨ ರಲ್ಲಿ ಭೂ ಕೈಲಾಸ ನಡುಮನೆ ಎಂಬ ಈ ಎರಡು ಅನುಬಂಧಗಳಲ್ಲಿ ಮಾದೇಶ್ವರರ ಬಗೆಗೆ ಅತ್ಯಂತ ಉಪಯುಕ್ತ ಮಾಹಿತಿಯನ್ನು ವಿವಿಧ ಮೂಲಗಳಿಂದ ಆಕರಗಳಿಂದ ಸಂಗ್ರಹಿಸಿಕೊಟ್ಟಿರುವುದು ಓದುಗರಿಗೆ ತುಂಬ ಉಪಯೋಗವಾಗಿದೆ. ಮಾದೇಶ್ವರರ ಸಮಸ್ತ ಮಾಹಿತಿಯನ್ನು ಒಳಗೊಂಡಿರುವ ಈ ಕೃತಿ ಒಂದು ಕೈಪಿಡಿಯಂತಿದೆ.

**ಅಷ್ಟಭಾಷಾಕವಿ ಚಂದ್ರಶೇಖರ ವಿರಚಿತ ಪಂಪಾಸ್ಥಾನ ವರ್ಣನಂ :**ಕ್ರಿ.ಶ.ಸು. ೧೪೩೦ರಲ್ಲಿದ್ದ ಚಂದ್ರಶೇಖರ ವಿರಚಿತ ಚಂಪೂಕಾವ್ಯ. ವಿರೂಪಾಕ್ಷನ ಆಸ್ಥಾನ ವರ್ಣನೆಯನ್ನೇ ವಸ್ತುವಾಗಿಟ್ಟುಕೊಂಡು ರಚಿತವಾದ ಪ್ರಥಮ ಕೃತಿ. ಈ ಅಪ್ರಕಟಿತ ಕೃತಿಯನ್ನು ಮೊದಲ ಬಾರಿಗೆ ಸಂಪಾದಿಸಿ ಪ್ರಕಟಿಸಲಾಗಿದೆ. ಕವಿಕಾವ್ಯ ವಿಷಯವನ್ನು ಪ್ರಸ್ತಾವನೆಯಲ್ಲಿ ನಿರೂಪಿಸಿರುವುದೇ ಅಲ್ಲದೆ ಕಠಿಣ ಶಬ್ದಕೋಶವನ್ನೂ ಕೊಡಲಾಗಿದೆ.

**ಗಣಸಹಸ್ರನಾಮಾವಳಿ :**ಪಾಲ್ಕುರಿಕೆ ಸೋಮನಾಥನ 'ಗಣಸಹಸ್ರನಾಮಾವಳಿ'ಯನ್ನು ಸಂಪಾದಿಸಿರುವ ಶಿವಮೂರ್ತಿ ಶಾಸ್ತ್ರಿಗಳು ಆಕೃತಿಯ ಬಗೆಗೆ ಅನೇಕ ವಿಷಯಗಳನ್ನು ಹೊರಗೆಡವಿದ್ದಾರೆ. ಪಾಲ್ಕುರಿಕೆ ಸೋಮನಾಥನ ಸಹಸ್ರಗಣನಾಮದ ಜತೆಗೆ ಅದಕ್ಕೆ ಮೂಲವಾದ ಮಲ್ಲಿಕಾರ್ಜುನ ಪಂಡಿತರ ಗಣಸಹಸ್ರ ನಾಮವನ್ನೂ ಈ ಗ್ರಂಥದಲ್ಲಿ ಜತೆಗೂಳಿಸಿದ್ದಾರೆ.

ಪಂಡಿತಾರಾಧ್ಯರ ಚರಿತೆಯನ್ನು ಮೊಟ್ಟ ಮೊದಲು ತೆಲುಗಿನಲ್ಲಿ ಬರೆದವನು ಪಾಲ್ಕುರಿಕೆ ಸೋಮನಾಥ. ಆ ತನ್ನ ಗ್ರಂಥದಲ್ಲಿ ಈ ಗಣಸಹಸ್ರವನ್ನು ದ್ವಿಪದಿ ಛಂದಸ್ಸಿನಲ್ಲಿ ಹೇಳಿದ್ದಾನೆ. ಅಲ್ಲದೆ ಕನ್ನಡದಲ್ಲಿಯೂ ಲಲಿತರಗಳೆಯಲ್ಲಿ ಗಣಸಹಸ್ರವನ್ನು ಬರೆದಿದ್ದಾನೆ. ಆದರೆ ಪಂಡಿತಾರಾಧ್ಯರ ಗಣಸಹಸ್ರಕ್ಕಿಂತ ಪಾಲ್ಕುರಿಕೆ ಕವಿಯ ಸಹಸ್ರಗಣ ನಾಮದಲ್ಲಿ ಕೆಲವು ಹೆಸರುಗಳು ಹೆಚ್ಚಾಗಿ ಸೇರಿದೆ. ಇವನ್ನು ಸೋಮನಾಥನೇ ಸೇರಿಸಿರಬೇಕೆಂದು ತೋರುತ್ತದೆ. ಈ ಗಣಸಹಸ್ರವನ್ನು ಮೊದಲು ಮಲ್ಲಿಕಾರ್ಜುನ ಪಂಡಿತಾರಾಧ್ಯರು ಬರೆದುದು ಸಂಸ್ಕೃತದಲ್ಲಿಯೋ? ತೆಲುಗು ಅಥವಾ ಕನ್ನಡದಲ್ಲಿಯೋ? ಎಂಬುದು ಸ್ಪಷ್ಟವಾಗಿಲ್ಲ. ಸೋಮನಾಥನು ತೆಲುಗು ಮತ್ತು ಕನ್ನಡ ಭಾಷೆಗಳೆರಡರಲ್ಲಿಯೂ ಗಣಸಹಸ್ರವನ್ನು ಬರೆದಿರುವುದನ್ನು ನೋಡಿದರೆ ಪಂಡಿತಾರಾಧ್ಯರು ಸಂಸ್ಕೃತದಲ್ಲಿ ಮೊದಲು ಇದನ್ನು ವಿರಚಿರಬಹುದೇ ಎಂದು ನಮಗೆ ತೋರಿ ಬರುತ್ತದೆ. ಆದರೆ ಈ ವಿಷಯವನ್ನು ಚೆನ್ನಾಗಿ ಪರಿಶೀಲಿಸಬೇಕಾಗಿದೆ. ಪಂಡಿತಾರಾಧ್ಯರಿಗೆ ಸಂಸ್ಕೃತ, ತೆಲುಗು ಮತ್ತು ಕನ್ನಡ ಭಾಷೆಗಳ ಪರಿಚಯವಿತ್ತೆಂದು ಅವರ ಚರಿತ್ರೆಯಿಂದ ಸುಲಭವಾಗಿ ತಿಳಿಯಬಹುದಾಗಿದೆ.

ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರಿಂದ ಸಂಸ್ಕೃತದಲ್ಲಿ ವಿರಚಿತರಾದ ಗಣಸಹಸ್ರನಾಮವನ್ನು ಪಾಲ್ಕುರಿಕೆ ಸೋಮನಾಥನು ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ವಿಸ್ತರಿಸಿ ಅಂದರೆ ಮತ್ತೆ ಕೆಲವು ಹೆಸರುಗಳನ್ನು ಸೇರಿಸಿ ಪ್ರಾರಂಭದಲ್ಲಿ ಕೆಲವು ಮಂತ್ರಗಳನ್ನು ಕೂಡಿಸಿ ಬರೆದನೆಂದು ನಾವು ಸದ್ಯ ತಿಳಿಯಬಹುದು.

ಗಣಸಹಸ್ರನಾಮವು ವೀರಶೈವರು ನಿತ್ಯ ಪಾರಾಯಣ ಮಾಡುವ ಗ್ರಂಥ, ಪಾಪ ಪರಿಹಾರವಾದುದು. ಗ್ರಂಥ ರಚನೆಯಿಂದ ಪಂಡಿತಾರಾಧ್ಯರಿಗೆ ಹೋದ ಕಣ್ಣುಗಳು ಮತ್ತೆ ಬಂದುವೆಂದು ಅವರ ಚರಿತ್ರೆಯಲ್ಲಿ ಹೇಳಿದೆ.

ಗಣಸಹಸ್ರ ನಾಮಾವಳಿಯಲ್ಲಿ ಪ್ರಮಥ ಗಣರು ೪೬೫, ರುದ್ರಗಣರು ೧೭೧, ಅಮರಗಣರು ೨೩೪, ದಶಗಣರು ೧೦, ತೇರಸರು ೧೩, ಷೋಡಶರು ೧೬, ತ್ರಿಷಷ್ಠಿ ಪುರಾತನರು ೬೩, ಯೋಗಾಚಾರ್ಯರು ೨೮ ಎಂದು ವಿಭಾಗ ಮಾಡಲಾಗಿದೆ. ಯಾವ ತತ್ವಗಳಂತೆ ಹೀಗೆ ವಿಭಾಗಿಸಿದರೆಂದು ತಿಳಿಯುವುದು ಕಷ್ಟವಾಗಿದೆ.

**ವೀರಶೈವ ಸಾಹಿತ್ಯ ಮತ್ತು ಇತಿಹಾಸ :**ಬಿ. ಶಿವಮೂರ್ತಿಶಾಸ್ತ್ರಿಗಳ ಅತ್ಯಂತ ಮಹತ್ವದ ಕೃತಿ ಎಂದರೆ ವೀರಶೈವ ಸಾಹಿತ್ಯ ಮತ್ತು ಇತಿಹಾಸವನ್ನು ಕುರಿತ ನಾಲ್ಕು ಸಂಪುಟಗಳು. ಸುಮಾರು ನಲವತ್ತು ವರ್ಷಗಳ ಕಾಲ ಅವರು ಬೇರೆ ಬೇರೆ ಸಂದರ್ಭ ಸನ್ನಿವೇಶಗಳಲ್ಲಿ ಮಾಡಿದ ಭಾಷಣಗಳು ಬರೆದ ಲೇಖನಗಳು ನಡೆಸಿದ ಸಂಶೋಧನೆಗಳನ್ನು ಕುರಿತ ಲೇಖನಗಳು ಈ ಸಂಪುಟಗಳಲ್ಲಿ ಸೇರ್ಪಡೆಯಾಗಿವೆ. ಇವುಗಳಲ್ಲಿ ವೀರಶೈವದರ್ಶನ, ವೀರಶೈವ ಸಾಹಿತ್ಯ, ವೀರಶೈವ ಇತಿಹಾಸಕ್ಕೆ ಸಂಬಂಧಪಟ್ಟ ಲೇಖನಗಳನ್ನು ಆಯಾ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಈ ಕೃತಿಯ ಮುಖ್ಯವಾದ ಉದ್ದೇಶವೆಂದರೆ ವೀರಶೈವ ಸಾಹಿತ್ಯ ಸಂಸ್ಕೃತಿಗಳನ್ನು ಜನಸಾಮಾನ್ಯರು ವಿದ್ಯಾರ್ಥಿಗಳು ತಿಳಿಯಬೇಕೆಂಬುದು. ಗ್ರಂಥಕರ್ತರೇ ಈ ಬಗೆಗೆ "ಜನಸಾಮಾನ್ಯರು ಈ ಉದಾತ್ತ ಗ್ರಂಥಗಳನ್ನು ಓದಿ ತದಂತರ್ಗರತಾದ ವೀರಶೈವ ದರ್ಶನ ಮತ್ತ ಧರ್ಮದ ಸ್ವರೂಪವನ್ನೂ ಸಾಹಿತ್ಯ ಮತ್ತು ಸಂಸ್ಕೃತಿಯ ಅರಿವನ್ನೂ ಅಳವಡಿಸಿಕೊಳ್ಳುವುದು ತುಂಬಾ ಕಷ್ಟಸಾಧ್ಯವಾದ ಕಾರ್ಯ. ಆದುದರಿಂದ ಸಾಮಾನ್ಯ ಜನರು, ಶಾಲೆಯ ವಿದ್ಯಾರ್ಥಿಗಳು ಮನೆಯ ಹೆಣ್ಣುಮಕ್ಕಳು ಸುಲಭವಾಗಿ ವೀರಶೈವ ದರ್ಶನ. ಸಾಹಿತ್ಯ ಇತಿಹಾಸಗಳ ಪರಿಚಯ ಮಾಡಿಕೊಳ್ಳಲು ಇಂತಹ ಸುಲಭವಾದ ಗ್ರಂಥಗಳು ಅವಶ್ಯವೆಂಬುದು ನಮ್ಮ ಅನುಭವಕ್ಕೆ ಹೊಳೆದಿರುವ ಸಂಗತಿ. ಅದಕ್ಕಾಗಿಯೇ ಈ ಗ್ರಂಥ ನಿರ್ಮಾಣ ಮತ್ತು ಪ್ರಕಟಣೆಯ ಸಾಹಸ" ಎಂದು ಹೇಳಿದ್ದಾರೆ.

"ವೀರಶೈವ ಧರ್ಮ ಮತ್ತು ಸಂಸ್ಕೃತಿ" ಎಂಬ ಕೃತಿಗೆ ಕನ್ನಡ ನಾಡಿನ ವಿದ್ವಾಂಸರೂ ಜಂಗಮ ವಿಶ್ವಕೋಶ ಎಂದೆನಿಸಿಕೊಂಡವರೂ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕರೂ ಆಗಿದ್ದ. ಡಾ. ಡಿ.ಎಲ್. ನರಸಿಂಹಾಚಾರ್ಯರು ಬರೆದಿರುವ ಪ್ರಸ್ತಾವನೆ ಬಿ. ಶಿವಮೂರ್ತಿಶಾಸ್ತ್ರಿಗಳ ಸಮಗ್ರ ಸಾಹಿತ್ಯ ಸಮೀಕ್ಷೆಯನ್ನೂ ಅವರ ವ್ಯಕ್ತಿತ್ವವನ್ನೂ, ಸ್ಥಾನಮಾನಗಳನ್ನೂ ಕಣ್ಣಿಗೆ ಕಟ್ಟುವಂತೆ ನಿರೂಪಿಸಿರುವ ನೈಜ ಬರವಣಿಗೆಗೆ ಯಥಾರ್ಥ ಸಾಹಿತ್ಯ ವಿಮರ್ಶೆಗೆ ಒಂದು ಕೈಗನ್ನಡಿಯಂತಿದೆ. ಶಿವಮೂರ್ತಿಶಾಸ್ತ್ರಿಗಳನ್ನು ಕನ್ನಡ ಲೋಕಕ್ಕೆ ಪರಿಚಯಿಸಿಕೊಡುವ ಪ್ರಮಾಣಭೂತ ದಾಖಲೆಯಾಗಿದೆ. ಅದನ್ನು ಯಥಾವತ್ತಾಗಿ ಉದ್ಧರಿಸಲಾಗಿದೆ :

"ವೀರಶೈವ ಧರ್ಮ ಮತ್ತು ಸಂಸ್ಕೃತಿ" ಎಂಬ ಗ್ರಂಥವನ್ನು ಬರೆದಿರುವ, ಆಸ್ಥಾನ ವಿದ್ವಾನ್, ಪಂಡಿತರತ್ನಂ, ಪದ್ಮಶ್ರೀ ಬಿರುದಾಂಕಿತ **ಬಿ. ಶಿವಮೂರ್ತಿ ಶಾಸ್ತ್ರಿಗಳು** ಕನ್ನಡ ನಾಡಿನ ವಿಖ್ಯಾತ ಪುರುಷರಲ್ಲಿ ಅಗ್ರಗಣ್ಯರಾಗಿದ್ದಾರೆ. ಕಳೆದ ನಾಲ್ಕು ದಶಕಗಳಿಂದ ನನಗೆ ಅವರ ಪರಿಚಯದ ಲಾಭವುಂಟಾಗಿದೆ. ಅವರ ಹೆಸರನ್ನೂ, ಅವರ ಕಾರ್ಯದ ಮಹತ್ವವನ್ನೂ ಅರಿಯದವರು ಕರ್ಣಾಟಕದಲ್ಲಿ ಬಹುಶಃ ಯಾರೂ ಇರಲಾರರು. ಸಾಧಾರಣ ಶಾಲಾಮಾಸ್ತರರಾಗಿ ತಮ್ಮ ಜೀವನವನ್ನು ಆರಂಭಿಸಿದ ಅವರು, ಉಪನ್ಯಾಸ ಮತ್ತು ಕೀರ್ತನೆಗಳನ್ನು ನಡೆಸುತ್ತ, ಕೀರ್ತನಕೇಸರಿ, ಕೀರ್ತನಾಚಾರ್ಯ, ಕರ್ಣಾಟಕ ವಿಭೂಷಣ ಎಂಬ ಪ್ರಶಸ್ತಿಗಳನ್ನು ಗುರುಪೀಠಗಳಿಂದ ಗಳಿಸಿದರು. ನಾನು ಚಿಕ್ಕವನಾಗಿದ್ದಾಗ ಅವರು ಹೇಳಿದ ಒಂದೆರಡು ಕೀರ್ತನೆಗಳನ್ನು ತುಮಕೂರಿನಲ್ಲಿ ಕೇಳಿದ್ದೇನೆ. ಅವರಿಗೆ ಸಂಗೀತದ ಪರಿಚಯ ಅಷ್ಟಾಗಿ ಇಲ್ಲದಿದ್ದರೂ, ಹೆಂಗಸರು, ಮಕ್ಕಳು, ದೊಡ್ಡವರು ಮುಂತಾದವರು ನೆರೆದಿರುವ ದೊಡ್ಡ ದೊಡ್ಡ ಸಭೆಗಳಲ್ಲಿ ಕಥೆ ಆರಂಭವಾಗುವುದೇ ತಡ, ಕೂಡಲೇ ಜನರನ್ನು ಆಕರ್ಷಿಸಿ ಏಕಾಗ್ರತೆಯಿಂದ ಅವರು ಕೇಳುವಂತೆ ಮಾಡುವ ಶಕ್ತಿ ಅವರಲ್ಲಿ ಮಿಗಿಲಾಗಿದೆ. ಸಹಸ್ರಾರು ಜನ ನೆರೆದಿರುವ ಮಹಾಸಭೆಗಳನ್ನು ಅವರು ತಮ್ಮ ವಾಗ್ಮಿಯತೆಯಿಂದ ವಶಪಡಿಸಿಕೊಂಡು ತಮ್ಮ ಇಚ್ಛೆಯಂತೆ ಅವುಗಳನ್ನು ಆಡಿಸುತ್ತಾರೆ, ಕುಣಿಸುತ್ತಾರೆ, ತಣಿಸುತ್ತಾರೆ. ಅವರಲ್ಲಿರುವ ರಸ ಹಾಸ್ಯದೃಷ್ಟಿ, ಅಪಾರವಾದ ಲೋಕಾನುಭವ, ಕಥೆಗಳನ್ನು ಸ್ವಾರಸ್ಯವಾಗಿ ನಿರೂಪಿಸುವ ಜಾಣ್ಮೆ, ರಸಭಾವ ತನ್ಮಯತೆ ಇವೆಲ್ಲ ಅವರ ಕೀರ್ತನಕಾರ ವ್ಯಕ್ತಿತ್ವದ ವಿಶಿಷ್ಟ ಲಕ್ಷಣಗಳಾಗಿವೆ. ಹೀಗೆ ಕೀರ್ತನಗಳನ್ನು ಮಾಡುತ್ತಾ ಅವರು ಕನ್ನಡನಾಡಿನಲ್ಲೆಲ್ಲ ಸಂಚಾರಮಾಡಿ ಜನ ಜಾಗೃತಿಯನ್ನುಂಟು ಮಾಡಿದ್ದಾರೆ. ಕನ್ನಡ ನಾಡಿನಲ್ಲಿ ಸಮಗ್ರ ಪರ್ಯಟನವನ್ನು ಇವರಂತೆ ಮಾಡಿರುವ ವ್ಯಕ್ತಿಗಳು ಹಲವರಿಲ್ಲವೆಂದು ಹೇಳಬಹುದು. ಸ್ವಪ್ರಯತ್ನದಿಂದ ದೀರ್ಘ ಕಾಲದ ಸ್ವಸಾಧನೆಯಿಂದ, ಕರ್ಣಾಟಕ ಭಾಷಾರತ್ನಂ ಕೈ.ಪಿ.ಆರ್. ಕರಿಬಸವಶಾಸ್ತ್ರಿಗಳ ಅನುಗ್ರಹದಿಂದ ಇವರು ತಮ್ಮ ಆತ್ಮ ತೇಜಸ್ಸನ್ನು ಬೆಳೆಸಿಕೊಂಡಿದ್ದಾರೆ. ಕನ್ನಡ ನಾಡಿನ ಸಂಚಾರದಲ್ಲಿ ನಾಡಿನ ಏಕೀಕರಣಕ್ಕೆ, ಇತಿಹಾಸ ಸಂಶೋಧನೆಗೆ ಇವರು ಮಿಗಿಲಾದ ಸೇವೆಯನ್ನು

ಸಲ್ಲಿಸಿದ್ದಾರೆ. ಮಾನ್ಯ ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳು ಮೈಸೂರು ಸರ್ಕಾರದಿಂದ 'ಪಂಡಿತರತ್ನಂ' ಬಿರುದನ್ನೂ, ಭಾರತ ಸರ್ಕಾರದವರಿಂದ 'ಪದ್ಮಶ್ರೀ' ಬಿರುದನ್ನೂ, ಹಲವು ಗುರುಪೀಠ ಮತ್ತು ವಿದ್ವತ್ಸಭೆಗಳಿಂದ ಕೆಲವು ಪ್ರಶಸ್ತಿಗಳನ್ನೂ ಪಡೆದಿದ್ದಾರೆ. ನಾಡಿನ ಜನಗಳಿಂದ **'ದೇವಗಂಗೆ'**ಎಂಬ ಪ್ರಶಸ್ತಿ ಗ್ರಂಥವನ್ನು ಒಪ್ಪಿಸಿಕೊಂಡಿದ್ದಾರೆ. ಇವರ ಹಿರಿಮೆಗೆ ಇದು ನಿದರ್ಶನವಾಗಿದೆ. ಕೀರ್ತನ ಕಾರ್ಯದಲ್ಲಿ ಇವರು ಸಿದ್ಧಿಯನ್ನು ಪಡೆಯುತ್ತಿರುವಾಗಲೇ ಆಸಕ್ತಿಯುಕ್ತ ವ್ಯಾಸಂಗದಿಂದ ಇವರು ಹೆಚ್ಚು ಪಾಂಡಿತ್ಯವನ್ನು ಸಂಪಾದಿಸಿಕೊಂಡರು. ಪ್ರೌಢಶಾಲೆಗಾಗಲಿ, ಕಾಲೇಜಿಗಾಗಲಿ ಇವರು ಹೋಗಲಿಲ್ಲ. ತಮಗೆ ಪರಿಚಯವಿದ್ದ ಪಂಡಿತರ ನೆರವಿನಿಂದ ಇವರು ಕನ್ನಡ ಸಾಹಿತ್ಯದ ಉದ್ಗ್ರಂಥಗಳ ಅಭ್ಯಾಸವನ್ನು ಮಾಡಿದರು. ಸಂಸ್ಕೃತ ಭಾಷಾ ಸಾಹಿತ್ಯದಲ್ಲೂ ಇವರಿಗೆ ವಿಸ್ತಾರವಾದ ಅರಿವುಂಟು. ಇವರು ಮಾಡಿರುವ ಭಾಷಣಗಳು, ಬರೆದಿರುವ ಲೇಖನಗಳು, ಪೀಠಿಕೆ - ಶಬ್ದಕೋಶಾದಿಗಳೊಡನೆ ಸಂಪಾದಿಸಿರುವ ಪ್ರಾಚೀನ ಕಾವ್ಯಗಳು, ಸಮಷ್ಟಿ ದೃಷ್ಟಿಯಿಂದ ರಚಿಸಿರುವ ಗ್ರಂಥಗಳು ಇವೆಲ್ಲ ಇವರ ವಿದ್ವತ್ತಿಗೆ ಪ್ರತೀಕಗಳಾಗಿವೆ. ಅವರ ಲೇಖನಿಯಿಂದ ಇದುವರೆಗೆ ಸುಮಾರು ಮೂವತ್ತು ಗ್ರಂಥಗಳು ಪ್ರಕಾಶಿತವಾಗಿವೆ. ರಾಘವಾಂಕನ ವೀರೇಶಚರಿತೆ, ನಿಜಗುಣರ ಪುರಾತನರ ತ್ರಿವಿಧಿ, ಕೊಂಡಗುಳಿ ಕೇಶಿರಾಜನ ಷಡಕ್ಷರಕಂದ, ಪಾಲ್ಕುರಿಕೆ ಸೋಮನಾಥನ ಗಣಸಹಸ್ರ ಹಾಗೂ ಬಸವೋದಾಹರಣಂ, ಚಂದ್ರಶೇಖರನ ಪಂಪಾಸ್ಥಾನವರ್ಣನಂ, ಶತಕಸಾಹಿತ್ಯ, ಶಿವಶರಣರ ತ್ರಿವಿಧಿಗಳು, ಘನಲಿಂಗಿ ದೇವರ ವಚನಗಳು ಇತ್ಯಾದಿಗಳನ್ನು ಇಲ್ಲಿ ಹೆಸರಿಸಬಹುದು. ಇದು ಸಾಮಾನ್ಯವಾದ ಸಿದ್ಧಿಯಲ್ಲವೆಂದು ಹೇಳಬಹುದು. ಮೈಸೂರು ಸರ್ಕಾರದ ಪ್ರಕಟನೆಗಳಾದ ಜೈಮಿನಿ ಭಾರತ, ಕನಕದಾಸರ ಕೀರ್ತನೆಗಳು, ಹರಿಭಕ್ತಿಸಾರ ಮೊದಲಾದ ಗ್ರಂಥಗಳನ್ನೂ, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ, ಕರ್ಣಾಟಕ ಕವಿಚರಿತ್ರೆ (ಭಾಗ - ೧) ಸೋಮೇಶ್ವರ ಶತಕ (ದ್ವಿತೀಯ ಮುದ್ರಣ) ಹಾಗೂ ಗಮಕ ಕಾವ್ಯಮಂಜರಿ ಮೊದಲಾದವುಗಳನ್ನೂ ಸಂಪಾದಿಸಿ ಪ್ರಕಟಿಸಲು ನೆರವಾಗಿದ್ದಾರೆ. ಕರ್ಣಾಟಕ ವಿಶ್ವವಿದ್ಯಾಲಯಕ್ಕೆ 'ಮಹಾಕವಿ ಷಡಕ್ಷರದೇವ' ಎಂಬ ಗ್ರಂಥವನ್ನು ಬರೆದು ಕೊಟ್ಟಿದ್ದಾರೆ. ಮೈಸೂರು - ಬೆಂಗಳೂರು ವಿಶ್ವ ವಿದ್ಯಾಲಯಗಳಿಗೂ ಗ್ರಂಥಗಳನ್ನು ಬರೆಯಲೊಪ್ಪಿದ್ದಾರೆ, ಕುಂದದ ಆಸಕ್ತಿ, ನಿರಂತರವಾದ ಸಾಧನೆ, ಜ್ಞಾನತೃಷೆ ಇವುಗಳ ಫಲ ಅವರ ವಿದ್ವತ್ತು ಮತ್ತು ಅವರ ಗ್ರಂಥಗಳು. ಅವರಿಗೆ ಇಂಗ್ಲಿಷ್ ಭಾಷಾ ಸಾಹಿತ್ಯದ ಪರಿಚಯವು ಚೆನ್ನಾಗಿ ಇದ್ದಿದ್ದರೆ ಅವರ ವ್ಯಕ್ತಿತ್ವವು ಇನ್ನೂ ಜ್ವಲಂತವಾಗುತ್ತಿತ್ತು. ಅವರು ಭರತ ಖಂಡದ ರಾಷ್ಟ್ರೀಯ ನಾಯಕರಲ್ಲಿ ಒಬ್ಬರೆಂದು ಪರಿಗಣಿತರಾಗುತ್ತಿದ್ದರು ಎಂದು ನನ್ನ ನಂಬಿಕೆ. ಪತ್ರಿಕೋದ್ಯಮದಲ್ಲೂ ಶ್ರೀಮಾನ್ ಶಾಸ್ತ್ರಿಗಳವರ ಸಾಧನೆ ಸಿದ್ಧಿಗಳು ಆಶ್ಚರ್ಯಕರವಾಗಿವೆ. ಸ್ವತಂತ್ರ ಕರ್ಣಾಟಕ (ಸಾಪ್ತಾಹಿಕ) ಶರಣ ಸಾಹಿತ್ಯ - (ಮಾಸಿಕ) ಎಂಬೆರಡು ಪತ್ರಿಕೆಗಳ ಸಂಪಾದಕರಾಗಿ ಅವರು ಅವುಗಳನ್ನು ಹಲವು ದಶಕಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ಈಗ ಅವರ ವಾರ ಪತ್ರಿಕೆ ನಿಂತಿದೆ. ೩೩ ವರ್ಷಗಳಿಂದ ಮಾಸಿಕ ಪತ್ರಿಕೆ ನಡೆಯುತ್ತಿದೆ. ಈ ಮೂಲಕವಾಗಿಯೂ ಅವರ ಸಾಹಿತ್ಯ ಸೇವೆಯು ನಾಡಿಗೆ ಸಲ್ಲುತ್ತಿದೆ. ಇವುಗಳಿಂದ ಜನಸಾಮಾನ್ಯರಲ್ಲಿ ತಿಳುವಳಿಕೆಯು ಹಬ್ಬುತ್ತಿದೆ. ಸ್ವಂತವಾದ ಮುದ್ರಣಾಲಯವನ್ನು ಬೆಂಗಳೂರಿನಲ್ಲಿ ಇವರು ಸ್ಥಾಪಿಸಿಕೊಂಡಿದ್ದಾರೆ. ಸಾಧಾರಣ ಶಾಲಾ ಉಪಾಧ್ಯಾಯರಾಗಿದ್ದ ಅವರಿಗೆ ಇಷ್ಟು ಉಪಪತ್ತಿ ಶಿವಕೃಪೆಯಿಂದ ಲಭ್ಯವಾಗಿರಬೇಕು. ಚಾಟಿಯಿಲ್ಲದೆ ಬುಗುರಿ ಆಡಿಸುವ ಚಾಕಚಕ್ಯ ಅವರಿಗೆ ಸಹಜವಾದುದೆಂಬಂತೆ ತೋರುತ್ತದೆ. ಸ್ಥಿರ ಸಂಕಲ್ಪಯುತನಾದ ಒಬ್ಬ ಮನುಷ್ಯನು ನಿರಂತರ ಉದ್ಯೋಗಶೀಲತೆಯಿಂದಲೂ, ಪ್ರಯತ್ನದಿಂದಲೂ, ಆತ್ಮೋದ್ಧಾರವನ್ನು ಮಾಡಿಕೊಂಡು, ಜನತೆಯ ಉದ್ಧಾರವನ್ನೂ ಹೇಗೆ ಮಾಡಲು ಸಾಧ್ಯವೆಂಬುದಕ್ಕೆ ಶ್ರೀಮಾನ್ ಶಾಸ್ತ್ರಿಗಳವರ ಜೀವನ ಒಂದು ನಿಚ್ಚಳವಾದ ಜೀವಂತವಾದ ನಿದರ್ಶನವಾಗಿದೆ. ಎಲ್ಲಕ್ಕೂ ಹೆಚ್ಚಾಗಿ ಇವರು ಸುಮಾರು ನಲವತ್ತು ವರ್ಷಕಾಲ ಕಷ್ಟಪಟ್ಟು ಸಂಗ್ರಹಿಸಿದ ಸುಮಾರು ೩೦೦ - ೪೦೦ ತಾಳೆಯೋಲೆ ಗ್ರಂಥಗಳು, ಸಂಸ್ಕೃತ ಗ್ರಂಥಗಳು, ತಾಮ್ರಶಾಸನಗಳು ಮೊದಲಾದುವನ್ನು ಮೈಸೂರು, ಬೆಂಗಳೂರು, ಕರ್ಣಾಟಕ ವಿಶ್ವವಿದ್ಯಾಲಯಗಳಿಗೆ ನಿಷ್ಕಾಮ ಬುದ್ಧಿಯಿಂದ ಅರ್ಪಿಸಿದ್ದಾರೆ. ಇದು ಇವರ ತ್ಯಾಗ ಗುಣಕ್ಕೆ ಸುಸ್ಪಷ್ಟ ನಿದರ್ಶನವಾಗಿದೆ.

ಶ್ರೀಮಾನ್ ಶಾಸ್ತ್ರಿಗಳವರ ಕನ್ನಡ ಗದ್ಯಶೈಲಿ ನಿರರ್ಗಳತೆಯಿಂದ ವಿಶಿಷ್ಟವಾಗಿರುವಂತೆಯೇ ಅವರ ಪದ್ಯಶೈಲಿಯು ಕೂಡ ಹೃದ್ಯವಾಗಿದೆ. ಕನ್ನಡ ಹಳೆಯ ಛಂದಸ್ಸುಗಳಲ್ಲಿಯೂ, ಹೊಸ ಛಂದೋರೂಪಗಳಲ್ಲಿಯೂ ಕವಿತೆಗಳನ್ನು ಬರೆವ ಅವರ ಕೌಶಲ್ಯ ಹಿರಿದಾಗಿದೆ. "ಶೂಲಪಾಣಿ" ಎಂಬ ಕಾವ್ಯನಾಮದಿಂದ '***ಶರಣ ಸಾಹಿತ್ಯ'***ದಲ್ಲಿ ಪ್ರಕಟವಾಗಿರುವ ಅವರ ಕವಿತೆಗಳ ಈ ಮಾತಿಗೆ ಉದಾಹರಣೆಗಳಾಗಿವೆ. 'ದುಂಬಿ - ನಾದ' ಎಂಬ ಅವರ ಇನ್ನೊಂದು ಕವಿತಾಸಂಕಲನ ಗ್ರಂಥವು ತನ್ನ ಸರಳಶೈಲಿಯಿಂದ ರಮಣೀಯವಾಗಿದೆಯಲ್ಲದೆ ಅವರ ಪ್ರತಿಭೆಯು ಬಹುಮುಖವಾಗಿರುವುದನ್ನು ಪ್ರತಿಬಿಂಬಿಸುತ್ತಿದೆ. ಪೊಟ್ಟಲಕೆರೆ ಶಾಸನ, ಬೀಳಗಿಯ

ಶಾಸನಗಳು, ಮಾದೇಶ್ವರ ಬೆಟ್ಟದ ಹೈದರಾಲಿಯ ಶಾಸನ ಮೊದಲಾದುವನ್ನು ಕಂಡುಹಿಡಿದು ಪ್ರಕಟಿಸಿದ್ದಾರೆ. ಹರಿಹರ - ರಾಘವಾಂಕರು, ನಿಜಗುಣ, ಸರ್ವಜ್ಞ, ಷಡಕ್ಷರ, ಲಕ್ಷ್ಮೀಶರನ್ನು ಕುರಿತು ಸಂಶೋಧನಾತ್ಮಕ ಲೇಖನಗಳನ್ನು ಬರೆದಿದ್ದಾರೆ, ಒಟ್ಟಿನಲ್ಲಿ ಶ್ರೀ ಶಾಸ್ತ್ರಿಗಳವರು, ಸಹೃದಯರು, ವಿದ್ವಾಂಸರು, ವಿದ್ವತ್‌ಪ್ರೇಮಿಗಳು. ತಮ್ಮ ಲೇಖನಗಳಿಂದ, ಉಪನ್ಯಾಸಗಳಿಂದ ಲೋಕಶಿಕ್ಷಕರು, ಸನ್ಮಾನ್ಯರು. ಅವರು ನಿರ್ಗವಿಗಳು, ಆದರೂ ಕನ್ನಡ ನಾಡೇ ಹೆಮ್ಮೆ ಪಡುವಂಥವರು. ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಕನ್ನಡ ಸಾಹಿತ್ಯ ಪರಿಷದಧ್ಯಕ್ಷರಾಗಿ ೧೦೦ ತಿಂಗಳು ಕಾಲ ಮಿಗಿಲಾದ ಸೇವೆ ಸಲ್ಲಿಸಿದ್ದಾರೆ. ಕನ್ನಡ ವಿಶ್ವಕೋಶ, ಕನ್ನಡ ನಿಘಂಟು ಸಮಿತಿ, ಸಂಗೀತ - ಸಾಹಿತ್ಯ ಅಕಾಡೆಮಿಗಳು, ಆಕಾಶವಾಣಿ ಸಲಹಾ ಸಮಿತಿ, ಬಸವ ಸಮಿತಿ, ಭಾರತೀಯ ವಿದ್ಯಾಭವನ ಮೊದಲಾದ ಹಿರಿಯ ಸಮಿತಿಗಳಲ್ಲಿದ್ದು ಇಂದಿಗೂ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀಮಾನ್ ಶಾಸ್ತ್ರಿಗಳವರ ಗ್ರಂಥಗಳನ್ನು ಬಹುವಾಗಿ ಕನ್ನಡಿಗರು ಓದಿರುವರೆಂಬುದರಲ್ಲಿ ಸಂದೇಹ ಪಡಬೇಕಾಗಿಲ್ಲ. ಏಕೆಂದರೆ ಅವುಗಳಲ್ಲಿ ಕೆಲವು ಮತ್ತೆ ಮತ್ತೆ ಮುದ್ರಣವಾಗಿವೆ. ಅವರ ವೀರಶೈವ ಸಾಹಿತ್ಯ ಮತ್ತು ಇತಿಹಾಸ (ಮೂರು ಭಾಗಗಳು) ಜನಪ್ರಿಯವಾಗಿರುವ ಗ್ರಂಥಗಳು. 'ವೀರಶೈವ ಮಹಾ ಪುರುಷರು' ಮತ್ತೊಂದು ಪ್ರಮುಖ ಗ್ರಂಥ. ಇದರಲ್ಲಿ ವೀರಶೈವ ಕವಿಗಳು, ವಿದ್ವಾಂಸರು, ಶ್ರೀಮಂತರು, ದಾನಿಗಳು, ವರ್ತಕರು, ಸಮಾಜಸೇವಕರು, ಮಠಾಧಿಪತಿಗಳು, ಅಧಿಕಾರಿಗಳು - ಇವರೇ ಮುಂತಾದ ಮಹನೀಯರ ಭಾವಪೂರ್ಣವಾದ, ಪರಿಚಯಾತ್ಮಕವಾದ ಲೇಖನಗಳಿವೆ. ಇವರಲ್ಲಿ ಕೆಲವರು ಇಂದಿನ ತರುಣರಿಗೆ ಆದರ್ಶಪ್ರಾಯರಾಗಿದ್ದಾರೆ. ಇಲ್ಲಿ ಈ ಶತಮಾನದ ಆರಂಭದ ವರ್ಷಗಳಲ್ಲಿ ಮದ್ರಾಸಿನ ಜಿ.ಎಂ. ನಟೇಶನ್ ಮತ್ತು ಕಂಪನಿಯವರು ಅಚ್ಚು ಹಾಕಿಸುತ್ತಿದ್ದ ಭಾರತೀಯ ಮಹಾಪುರುಷರು, ರಾಜಕಾರಣಿಗಳು, ವಿಜ್ಞಾನಿಗಳು ಮುಂತಾದವರ ಪರಿಚಯದ ಕಿರುಹೊತ್ತಿಗೆಗಳ ನೆನಪುಂಟಾಗುತ್ತದೆ. ಈ ಗ್ರಂಥವನ್ನು ನೋಡಿದಾಗ ಅವು ಇಂಗ್ಲಿಷ್ ಭಾಷೆಯಲ್ಲಿವೆ. ಇವು ತಿಳಿಯಾದ ಕನ್ನಡ ನುಡಿಗಳಲ್ಲಿವೆ. ಎರಡಕ್ಕೂ ಇಷ್ಟೇ ವ್ಯತ್ಯಾಸ. ಈ ಗ್ರಂಥದಿಂದ ಕನ್ನಡ ನಾಡಿನ ಬಾಲೆ - ಬಾಲಕರ ಮೇಲೆ ಒಳ್ಳೆಯ ಪ್ರಭಾವವು ಉಂಟಾಗುತ್ತದೆ. ಕರ್ನಾಟಕ ಸಂದರ್ಶನ, ಬಿದನೂರು ಶಿವಪ್ಪನಾಯಕ ಎಂಬ ಗ್ರಂಥಗಳು ಅವಲೋಕನ ಯೋಗ್ಯವಾಗಿವೆ ಹಾಗೂ ಸಂಶೋಧನಾತ್ಮಕವಾದ ವಿಚಾರಗಳಿಂದ ಕೂಡಿವೆ. ಕನ್ನಡದಲ್ಲಿರುವ ವೀರಶೈವ ಸಾಹಿತ್ಯವನ್ನು ಶ್ರೀಮಾನ್ ಶಾಸ್ತ್ರಿಗಳವರು ಐತಿಹಾಸಿಕ ದೃಷ್ಟಿಯಿಂದಲೂ, ವಿಮರ್ಶಾತ್ಮಕ ದೃಷ್ಟಿಯಿಂದಲೂ ಅಭ್ಯಾಸ ಮಾಡಿದ್ದಾರೆ. ಹಲವು ಹೊಸ ವಿಷಯಗಳನ್ನು ಹೊರಗೆಡವಿದ್ದಾರೆ. ತಮ್ಮ ನಿರೂಪಣೆಯ ಪರಿಪೂರ್ಣತೆಯ ದೃಷ್ಟಿಯಿಂದ ಅವರು, ಸಂಸ್ಕೃತ, ತೆಲುಗು, ತಮಿಳು ಭಾಷೆಗಳಲ್ಲಿರುವ ವೀರಶೈವ ಸಾಹಿತ್ಯದ ಗ್ರಂಥಗಳನ್ನೂ ವ್ಯಾಸಂಗಮಾಡಿ ಅವುಗಳಿಂದ ನೆರವನ್ನು ಪಡೆದಿದ್ದಾರೆ. ವೀರಶೈವ ಸಾಹಿತ್ಯವನ್ನು ಕುರಿತಾದ ಅವರ ಜ್ಞಾನವು, ಯಾವ ಉತ್ಕೃಷ್ಟ ಕನ್ನಡಸಾಹಿತ್ಯ ಪರೀಕ್ಷೆಯಲ್ಲಿ ತೇರ್ಗಡೆಯಾದ ಸ್ನಾತಕೋತ್ತರ ವಿದ್ಯಾರ್ಥಿಯ ಜ್ಞಾನಕ್ಕಿಂತ ಎಷ್ಟೋ ಅತಿಶಯವಾಗಿದೆ. ಸ್ವಂತ ಪರಿಶ್ರಮದಿಂದ ಇಷ್ಟನ್ನೆಲ್ಲಾ ಅವರು ಹೇಗೆ ಕಲಿತರೆಂದು ಅಚ್ಚರಿ ಪಡಬೇಕಾಗಿದೆ.

ಈಗ ಪ್ರಕಟವಾಗಿರುವ ಈ ಗ್ರಂಥದಲ್ಲಿ ಒಟ್ಟು ೧೦ ಲೇಖನಗಳಿವೆ. ಅವುಗಳಲ್ಲಿ ಹತ್ತು, ಹರಿಹರ, ರಾಘವಾಂಕ, ಕೆರೆಯ ಪದ್ಮರಸ, ಷಡಕ್ಷರ ಕವಿ, ನಿಜಗುಣಶಿವಯೋಗಿ, ಸರ್ಪಭೂಷಣ, ಗುಬ್ಬಿಮಲ್ಲಣಾರ್ಯ, ತೋಂಟದ ಸಿದ್ಧಲಿಂಗಯತಿ, ಪಾಲ್ಕುರಿಕೆ ಸೋಮನಾಥ ಈ ಕವಿಗಳ ಜೀವನದಲ್ಲಿ ನಡೆದಿರಬಹುದಾದ ಕೆಲವು ಘಟನೆಗಳನ್ನು ಕುರಿತಿವೆ. ಮಹಾಕವಿ ಹರಿಹರನನ್ನು ಆಂಧ್ರಪ್ರದೇಶದ ಗಣಿಕೆಯೊಬ್ಬಳು ಮೋಹಿಸಿ ಹಂಪೆಗೆ ಬಂದು ಆತನ ದರ್ಶನ ಮಾಡಿದ ಕೂಡಲೇ ತನ್ನ ಚಿತ್ತವಿಕಾರವನ್ನು ಕಳೆದುಕೊಂಡು ಭಕ್ತಳಾಗಿ ಶಿವಧರ್ಮವನ್ನು ಪಡೆದಳೆಂಬ ಕಥೆ ಸ್ವಾರಸ್ಯವಾಗಿದೆ. ಇಂಥದೇ ಆದ ಒಂದು ಕಥೆ ಪದ್ಮರಾಜ ಪುರಾಣದಲ್ಲಿ ದೊರೆಯುತ್ತದೆ. ಅದು ಕೆರೆಯ ಪದ್ಮರಸನು ತಟಾಕ ನಿರ್ಮಾಣವನ್ನು ಮಾಡಿದ ಪವಾಡದ ಕಥೆಯು ಆತನನ್ನು ಕುರಿತಾದ ಗ್ರಂಥದಲ್ಲಿ ನಿರೂಪಿತವಾಗಿದೆ. ಇದು ಹೇಗೆ ನಡೆದಿರಬಹುದೆಂಬುದನ್ನು ಭಾವದ ಬಲದಿಂದ ಮನಗಂಡು ಲೇಖಕರು ಇಲ್ಲಿ ಸರಸವಾಗಿ ಹೇಳಿದ್ದಾರೆ. ಷಡಕ್ಷರನು ತನ್ನ ರಾಜಶೇಖರ ವಿಲಾಸವನ್ನು ರಚಿಸುವುದಕ್ಕೆ ಕಾರಣ ಕೆಲವು ದಂತಕಥೆಗಳಲ್ಲಿ ಹೇಳಿದೆ. ಶೃಂಗಾರಕಾವ್ಯವಾದ ಲೀಲಾವತಿ ಗ್ರಂಥಕ್ಕೆ ಆಗುತ್ತಿದ್ದ ಮೆರವಣಿಗೆಯನ್ನು ತಡೆದು ನೇಮಿಚಂದ್ರನನ್ನು ಮೀರಿಸಿದಂತೆ, ಲಕ್ಷ್ಮೀಶ, ರುದ್ರಭಟ್ಟ, ಷಡಕ್ಷರ ಈ ಮೂವರಿಗೆ ಸಂಬಂಧಿಸಿದ ಇನ್ನೊಂದು ಕಥೆಯನ್ನು ಅವರು ಹೇಳಬಹುದಾಗಿತ್ತು. 'ಗುಬ್ಬಿ' ಎಂಬ ಹೆಸರು ಆ ಊರಿಗೆ ಬಂದ ಕಾರಣವನ್ನು ತಿಳಿಸಿದ ಕಥೆ ಆಕರ್ಷಕವಾಗಿದೆ. ಈ ಕವಿಗಳನ್ನು ಅವಲಂಬಿಸಿ ರಚಿತವಾಗಿರುವ ಅಥವಾ ಮರಳಿ ಹೇಳಿರುವ ಈ ಕಥೆಗಳು ಬರೆ ಕಥೆಗಳಾಗಿಯೇ ಉಳಿದುಕೊಳ್ಳದೇ ಈ

ಕವಿಗಳ ಪರಿಚಯವನ್ನು ಸಾಮಾನ್ಯರಿಗೂ ಮಾಡಿ ಕೊಡುವ ಬರಹಗಳಾಗಿವೆ. ಸಾಹಿತ್ಯ ಚರಿತ್ರೆಯ ಪ್ರಧಾನಾಂಶಗಳನ್ನು ಅವರಿಗೆ ತಿಳಿಸಿ ಕೊಡುತ್ತವೆ. ಈ ದೃಷ್ಟಿಯಿಂದ ಈ ಕಥೆಗಳು ಬೋಧಪ್ರದವಾಗಿವೆ.

ಇನ್ನುಳಿದ ಹತ್ತು ಲೇಖನಗಳು ವೀರಶೈವ ಧರ್ಮಕ್ಕೂ ಸಂಸ್ಕೃತಿಗೂ ಸೇರಿದುವಾಗಿವೆ. 'ವೀರಶೈವ ಧರ್ಮ' ಎಂಬ ಲೇಖನವು ಆ ಧರ್ಮದ ಸ್ವರೂಪವನ್ನು ಸಾಮಾನ್ಯರಿಗೂ ತಿಳಿಯುವಂತೆ ಪ್ರತಿಪಾದನೆ ಮಾಡುತ್ತಿದೆ. ಜಗತ್ತಿನಲ್ಲಿರುವ ಇತರ ಧರ್ಮಗಳ ಸಾರವು ಒಂದಲ್ಲ ಒಂದು ತೆರನಾಗಿ ವೀರಶೈವದಲ್ಲಿ ಇದೆ ಎಂಬ ಅವರ ಪ್ರತಿಪಾದನೆ ಅಭಿಮಾನಯುಕ್ತವಾಗಿದೆ. ಈಗಾಗಲೇ ಈ ಲೇಖನವು ತೆಲುಗು ಭಾಷೆಯಲ್ಲಿಯೂ ಅನುವಾದವಾಗಿರುವುದು ಗಮನಾರ್ಹವಾಗಿದೆ. ಶ್ರೀ ಶೈಲ ಕ್ಷೇತ್ರವನ್ನು ಕುರಿತು ಹೇಳುತ್ತಾ ಅದು ಹೇಗೆ, ಅಲ್ಲಮಪ್ರಭು, ಮಹಾದೇವಿಯಕ್ಕ ಮುಂತಾದ ಭಕ್ತರ ಮುಕ್ತಿ ಕ್ಷೇತ್ರವಾಯಿತೆಂಬುದನ್ನು 'ಶ್ರೀ ಶೈಲವೂ ವೀರಶೈವವೂ" ಎಂಬ ಲೇಖನ ವರ್ಣಿಸುತ್ತದೆ. 'ಇಷ್ಟಲಿಂಗದ ಮಹತ್ವ' ಎಂಬ ಲೇಖನವು ಲೇಖಕರ ಧರ್ಮಾನುರಾಗವನ್ನು ಪ್ರದರ್ಶಿಸುವುದಾಗಿದೆ. ಅಲ್ಲದೆ ಅವರಿಗೆ ವೀರಶೈವ ಸಿದ್ಧಾಂತದಲ್ಲಿರುವ ಪಾಂಡಿತ್ಯಕ್ಕೆ ನಿದರ್ಶನವಾಗಿದೆ. 'ಶಿವ ಶರಣರ ಕ್ಷೇತ್ರಗಳು' ಎಂಬ ಲೇಖನ ಅವರ ದೇಶ ಸಂಚಾರದ ಫಲವಾಗಿದೆ. ತಾವು ಕಣ್ಣಾರೆ ಕಂಡ ಆ ಕ್ಷೇತ್ರಗಳ ಶಿಲ್ಪಕಲೆಯನ್ನೂ ಕಿವಿಯಾರೆ ಕೇಳಿದ ಕ್ಷೇತ್ರದ ಕಥಾನಕಗಳನ್ನೂ ಅದು ಗರ್ಭೀಕರಿಸಿಕೊಂಡಿದೆ. ಅದು ಓದುಗರಲ್ಲಿ ಕುತೂಹಲವನ್ನು ಉಂಟುಮಾಡುವುದಾಗಿದೆ. ಗ್ರಂಥದ ಅಂತ್ಯದಲ್ಲಿ ಕಾಣುವ ಶಬ್ದಕೋಶವು ಮುಖ್ಯವಾಗಿ 'ಶಿವಾನುಭವ ಶಬ್ದಕೋಶ'ವಾಗಿದೆ. ವೀರಶೈವರ ಪರಿಭಾಷೆಯನ್ನು ತಿಳಿಯಲು ಈ ಕೋಶ ನೆರವಾಗುತ್ತದೆ. ಒಟ್ಟಿನಲ್ಲಿ ಈ ಗ್ರಂಥವು **ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳು** ಕನ್ನಡಕ್ಕೆ ನೀಡಿರುವ ಒಂದು ಬೆಲೆಯುಳ್ಳ ಕೊಡುಗೆಯಾಗಿದೆ. ಇದನ್ನು ಓದಲು ಆರಂಭಿಸಿದರೆ ಪೂರ್ತಿ ಮುಗಿಸುವವರೆಗೂ ಪುಸ್ತಕವನ್ನು ಕೆಳಗಿರಿಸಲು ಮನಸ್ಸು ಬರುವುದಿಲ್ಲ. ಶಾಸ್ತ್ರಿಗಳ ಖ್ಯಾತಿ ಈ ಗ್ರಂಥ ರಚನೆಯಿಂದ ಇನ್ನಷ್ಟು ಹೆಚ್ಚಳಗೊಂಡಿದೆ. ಕನ್ನಡಿಗರೆಲ್ಲರೂ ಈ ಗ್ರಂಥವನ್ನು ಅತಿಶಯವಾದ ಆದರದಿಂದ ಸ್ವಾಗತಿಸುವರೆಂದು ನಂಬಿದ್ದೇನೆ. ಇವರು ನಲವತ್ತು ವರ್ಷಗಳ ಪರಿಶ್ರಮದಿಂದ ರಚಿಸಿರುವ 'ವೀರಶೈವ ವಿಭೂತಿಗಳು' ಎಂಬ ಗ್ರಂಥವು ಬೇಗನೆ ಬೆಳಕಿಗೆ ಬರಲೆಂದು ಆಶಿಸುತ್ತೇನೆ. ಇವರು ಪ್ರಕಟನೆಗಾಗಿ ಸಿದ್ಧ ಪಡಿಸಿಕೊಂಡಿರುವ, ಸ್ವಾದಿ ಸದಾಶಿವರಾಜನ ಪಂಚಶತ ನೀತಿಗಳು, ತೋಂಟದ ರಾಯನ ಸಾಂಗತ್ಯ, ಅಭಿನವ ಕಾಳಿದಾಸ, ಮಹಾಕವಿ ಲಕ್ಷ್ಮೀಶ, ಮಹಾತ್ಮ ಕನಕದಾಸ, ನಿಜಗುಣ ಶಿವಯೋಗಿ, ಕನ್ನಡ ಸಾಹಿತ್ಯ ಸಂದರ್ಶನ, ಕೆಳದಿಯ ರಾಣಿ ನಾಟಕ ಮೊದಲಾದ ಗ್ರಂಥಗಳೂ ಬೇಗನೆ ಬೆಳಕಿಗೆ ಬರುವಂತೆ ಭಗವಂತನು ಇವರನ್ನು ಅನುಗ್ರಹಿಸಲಿ. ಕನ್ನಡ ನಾಡು ನುಡಿ ಸಾಹಿತ್ಯಗಳಿಗೆ ತಮಗೇ ವಿಶಿಷ್ಟವಾಗಿರುವ ರೀತಿಯಲ್ಲಿ ಸೇವೆಸಲ್ಲಿಸುತ್ತಿರುವ ಶಾಸ್ತ್ರಿಗಳಿಗೆ ನನ್ನ ಗೌರವ ಪೂರ್ವಕವಾದ ಅಭಿನಂದನೆಗಳನ್ನು ಸಮರ್ಪಿಸುತ್ತೇನೆ. ಅವರ ಸೇವೆ ಇನ್ನೂ ದೀರ್ಘಕಾಲ ನಡೆಯುವಂತೆ ಭಗವಂತನು ಇವರನ್ನು ಅನುಗ್ರಹಿಸುವಂತಾಗಲಿ ಎಂದು ಮನಃಪೂರ್ವಕವಾಗಿ ಹಾರೈಸುತ್ತೇನೆ.

**೧೪. ಪದವಿ ಪ್ರಶಸ್ತಿಗಳು**

ಶಿವಮೂರ್ತಿ ಶಾಸ್ತ್ರಿಗಳು ಅರಮನೆ ಮತ್ತು ಗುರುಮನೆಗಳಿಂದ ಸನ್ಮಾನಿಸಲ್ಪಟ್ಟಿದ್ದಾರೆ. ಇವರಿಗೆ ಸಂದ ಸನ್ಮಾನ ಮತ್ತು ಪ್ರಶಸ್ತಿಗಳು ಅಸಂಖ್ಯಾತ. ಹೊರನಾಡು ಕನ್ನಡಿಗರ ಸಂಘ ಸಂಸ್ಥೆಗಳೂ ಶಾಸ್ತ್ರಿಗಳಿಗೆ ಗೌರವ - ಪ್ರಶಸ್ತಿಗಳನ್ನು ನೀಡಿವೆ. ೧೯೩೯ರಲ್ಲಿ ಮೈಸೂರು ಅರಮನೆಯಿಂದ ಆಸ್ಥಾನವಿದ್ವಾಂಸರಾಗಿ ನೇಮಕಗೊಂಡರು. ಶಾಸ್ತ್ರಿಗಳ ಆಸಾಧಾರಣ ಪಾಂಡಿತ್ಯವನ್ನು ಮೇಧಾಶಕ್ತಿಯನ್ನು ಪರಿಗಣಿಸಿ ಜಯಚಾಮರಾಜೇಂದ್ರ ಒಡೆಯರು ತಮ್ಮ ೩೧ನೆಯ ವರ್ಷ ವರ್ಧಂತಿ ಮಹೋತ್ಸವದಲ್ಲಿ 'ಪಂಡಿತರತ್ನಂ' ಬಿರುದನ್ನು ದಯಪಾಲಿಸಿದರು.

ಶಿವಮೂರ್ತಿ ಶಾಸ್ತ್ರಿಗಳು ಎಲ್ಲ ಧರ್ಮಗಳ ಮಠಾಧೀಶ್ವರರೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಂಡರು. ಅನೇಕ ಮಠಾಧೀಶ್ವರರು ಶಾಸ್ತ್ರಿಗಳನ್ನು ಸತ್ಕರಿಸಿ ಸನ್ಮಾನಿಸಿ ಪ್ರಶಸ್ತಿಗಳನ್ನು ನೀಡಿದ್ದಾರೆ. ಶ್ರೀಮದ್ರಂಭಾಪುರಿ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯರು ಸುವರ್ಣಪದಕದೊಂದಿಗೆ 'ಕೀರ್ತನ ಕೇಸರಿ' ಮತ್ತು 'ಕವಿರತ್ನ' ಪ್ರಶಸ್ತಿಗಳನ್ನು ಪ್ರದಾನ ಮಾಡಿದ್ದಾರೆ. ಶ್ರವಣಬೆಳುಗೊಳದ ಸಿದ್ಧಸಿಂಹಾಸನಾಧೀಶ್ವರರಾದ ಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯ ಸ್ವಾಮಿಗಳು 'ಕೀರ್ತನ ವಿಚಕ್ಷಣ' ಎಂಬ ಬಿರುದನ್ನು ನೀಡಿದ್ದಾರೆ. ಶ್ರೀಮದುಜ್ಜಯಿನಿ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಬಂಗಾರದ

ಪದಕದೊಂದಿಗೆ 'ಶಿವಕೀರ್ತನ ಕವಿರಾಜ' ಎಂಬ ಪ್ರಶಸ್ತಿಯನ್ನು ಪ್ರದಾನ ಮಾಡಿದ್ದಾರೆ. ಶ್ರೀಶೈಲ ಸೂರ್ಯಸಿಂಹಾಸನಾಧೀಶರಾದ ಜಗದ್ಗುರು ವಾಗೀಶ ಪಂಡಿತಾರಾಧ್ಯರು 'ವಿಮರ್ಶನಾಚಾರ್ಯ' ಎಂಬ ಬಿರುದನ್ನು ಕಾಶಿ ಜಗದ್ಗುರು ವಿಶ್ವಾರಾಧ್ಯರು 'ಕರ್ಣಾಟಕ ವಿಭೂಷಣ' ಎಂಬ ಪ್ರಶಸ್ತಿಯನ್ನು ನೀಡಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರಕಾರಗಳು ಶಾಸ್ತ್ರಿಗಳ ಬಹುಮುಖ ಪ್ರತಿಭೆಯನ್ನೂ ಸಾಹಿತ್ಯಕ, ಧಾರ್ಮಿಕ, ಸಾಮಾಜಿಕ, ರಾಜಕೀಯ ಮೊದಲಾದ ಕ್ಷೇತ್ರಗಳಲ್ಲಿನ ಅನುಪಮ ಸೇವೆಯನ್ನು ಪರಿಗಣಿಸಿ ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ.

ದಿನಾಂಕ ೨೬-೧- ೯೬೭ರ ಗಣರಾಜ್ಯದಿನದಂದು ಭಾರತದ ರಾಷ್ಟ್ರಾಧ್ಯಕ್ಷರು ಶಾಸ್ತ್ರಿಗಳಿಗೆ 'ಪದ್ಮಶ್ರೀ' ಎಂಬ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಿದ್ದಾರೆ. ೧೯೬೭ರ ನವೆಂಬರ್ ೨ ರಂದು ರಾಜ್ಯ ಸರ್ಕಾರವು ಶಾಸ್ತ್ರಿಗಳಿಗೆ ರಾಜ್ಯೋತ್ಸವ ಸಾಹಿತ್ಯ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿದೆ. ಕರ್ಣಾಟಕ ವಿಶ್ವವಿದ್ಯಾನಿಲಯವು ೧೯೭೫ರಲ್ಲಿ ಶಾಸ್ತ್ರಿಗಳಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಸನ್ಮಾನಿಸಿತು. ಈ ಮೇಲಿನ ಪ್ರಶಸ್ತಿಗಳಷ್ಟೇ ಅಲ್ಲದೆ ಕರ್ನಾಟಕದ ಹಲವಾರು ಮಠಮಾನ್ಯಗಳೂ ಸಂಘ ಸಂಸ್ಥೆಗಳೂ ಬಿರುದು ಬಾವಲಿಗಳನ್ನು ಪ್ರಶಸ್ತಿ ಪತ್ರಿಕೆಗಳನ್ನು ನೀಡಿರುವುದನ್ನು ಕಾಣಬಹುದಾಗಿದೆ.

**೧೫. ದೇವಗಂಗೆ ಪ್ರಶಸ್ತಿ ಗ್ರಂಥ ಸಮರ್ಪಣೆ**

ಶಿವಮೂರ್ತಿ ಶಾಸ್ತ್ರಿಗಳ ಷಷ್ಟಿ ಶಾಂತಿಯ ಸವಿನೆನಪಿಗಾಗಿ ೧೬ - ೯ - ೧೯೬೮ರಂದು 'ದೇವಗಂಗೆ' ಎಂಬ ಪ್ರಶಸ್ತಿ ಗ್ರಂಥವನ್ನು ಪದ್ಮಶ್ರೀ ಡಾ. ವಿ.ಕೃ. ಗೋಕಾಕರ ಅಧ್ಯಕ್ಷತೆಯಲ್ಲಿ ಸಮರ್ಪಿಸಲಾಯಿತು. ಬೆಂಗಳೂರಿನ ಪುರಭವನದಲ್ಲಿ ಅತ್ಯಂತ ವಿಜೃಂಭಣೆ ಯಿಂದ ನಡೆದ ಕಾರ್ಯಕ್ರಮದಲ್ಲಿ ಸುತ್ತೂರು ಜಗದ್ಗುರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು. ಡಾ. ಬಿ.ಡಿ. ಜತ್ತಿ, ಡಾ. ಎ.ಎಸ್. ಅಡಕೆ, ಪ್ರೊ. ಎಂ. ಮರಿಯಪ್ಪಭಟ್, ಪ್ರೊ. ಡಿ. ಜವರೇಗೌಡ, ಡಾ. ಆರ್.ಸಿ. ಹಿರೇಮಠ, ಕಡಿದಾಳ್ ಮಂಜಪ್ಪ, ಪ್ರೊ. ಎಚ್.ಎಂ. ಶಂಕರನಾರಾಯಣರಾವ್ ಮೊದಲಾದ ಮಹನೀಯರು ಭಾಗವಹಿಸಿದ್ದರು. ಸುಮಾರು ೫೦೦ ಪುಟಗಳುಳ್ಳ ಈ ಗ್ರಂಥದಲ್ಲಿ ವಿವಿಧ ವಿಷಯಗಳನ್ನೊಳಗೊಂಡ ೫೦ ಮಂದಿ ವಿದ್ವಾಂಸರ ಲೇಖನಗಳಿವೆ. ಶಿವಮೂರ್ತಿಶಾಸ್ತ್ರಿಗಳ ಅವಿರತ ಅಖಂಡ ಸೇವೆಗೆ ಈ ಪ್ರಶಸ್ತಿಗ್ರಂಥ ಕರ್ಣಾಟಕ ಜನತೆಯ ಪ್ರೀತಿಯ ದ್ಯೋತಕವಾಗಿದೆ.

**೧೬. ಗ್ರಂಥಭಂಡಾರ ದಾನ**

ಶಾಸ್ತ್ರಿಗಳು ಪುಸ್ತಕಪ್ರೇಮಿ; ವಿದ್ವತ್ಪಕ್ಷಪಾತಿ. ವಿದ್ವಾಂಸರಿಗೆ ಅನ್ಯಾಯವಾದಾಗ ಅವರಿಗೆ ನ್ಯಾಯದೊರಕಿಸುವುದಕ್ಕಾಗಿ ನಿಷ್ಠೆಯಿಂದ ಹೋರಾಡಿದ ಪ್ರಸಂಗಗಳಿವೆ. ಶಾಸ್ತ್ರಿಗಳ ಬಳಿ ಅಪಾರವಾದ ಗ್ರಂಥ ಭಂಡಾರವಿತ್ತು. ಕೀರ್ತನೆಗಳಿಗೆ ಭಾಷಣಗಳಿಗೆ ಹೋದೆಡೆಗಳಲ್ಲಿ ಲಭ್ಯವಾದ ಹಸ್ತಪ್ರತಿಗಳನ್ನು ಗ್ರಂಥಗಳನ್ನು ತುಂಬ ಎಚ್ಚರಿಕೆ ಯಿಂದ ಕಾಪಾಡಿಕೊಂಡು ಬಂದಿದ್ದರು. ಈ ಹಸ್ತಪ್ರತಿಗಳ ಸಂರಕ್ಷಣೆ ಕಷ್ಟಸಾಧ್ಯ ವೆನಿಸಿದಾಗ ಅವನ್ನು ಸುರಕ್ಷಿತವಾಗಿ ಸಂರಕ್ಷಿಸುವ ಸಂಸ್ಥೆಗಳಿಗೆ ನಿಷ್ಕಾಮ ಬುದ್ಧಿಯಿಂದ ದಾನಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಕರ್ಣಾಟಕ ವಿಶ್ವವಿದ್ಯಾನಿಲಯಗಳಿಗೆ ಹಸ್ತಪ್ರತಿಗಳನ್ನು ಹಂಚಿ ದಾನ ಮಾಡಿದ್ದಾರೆ. ಮುದ್ರಿತ ಪುಸ್ತಕಗಳನ್ನು ಉಳಿದ ಹಸ್ತಪ್ರತಿಗಳನ್ನು ಸಂಪೂರ್ಣವಾಗಿ ಬೆಂಗಳೂರಿನ ಬಸವ ಸಮಿತಿಗೆ ದಾನ ಮಾಡಿದ್ದಾರೆ. ಇದು ಶಾಸ್ತ್ರಿಗಳ ನಿಸ್ವಾರ್ಥ ನಿರಪೇಕ್ಷ ಮನೋಭಾವಕ್ಕೆ ಜ್ವಲಂತ ಸಾಕ್ಷಿಯಾಗಿದೆ.

**೧೭. ಅಪ್ರತಿಮ ದೇಶಾಭಿಮಾನ**

ಶಾಸ್ತ್ರಿಗಳು ಕರ್ಣಾಟಕ ಏಕೀಕರಣದ ಕಟ್ಟಾಳು ಹೇಗೋ ಹಾಗೆಯೇ ಭಾರತ ಸ್ವಾತಂತ್ರ್ಯದ ವೀರ ಸೇನಾನಿಯೂ ಆಗಿದ್ದರು. ಅವರು ಅಪ್ಪಟ ಖಾದಿಯನ್ನು ಧರಿಸುತ್ತಿದ್ದರು. ಆದರೆ ಮೈಸೂರು ರುಮಾಲು ಅವರಿಗೆ ತುಂಬಾ ಪ್ರಿಯವಾದುದು. ಅವರು ಗುಬ್ಬಿಯಲ್ಲಿ ಉಪಾಧ್ಯಾಯರಾಗಿದ್ದಾಗ ನಡೆದ ಒಂದು ಪ್ರಸಂಗ ಅವರ ದೇಶಪ್ರೇಮಕ್ಕೆ ಜ್ವಲಂತ ನಿದರ್ಶನವಾಗಿದೆ. ಗುಬ್ಬಿಯಲ್ಲಿ

ಉಪಾಧ್ಯಾಯರಾಗಿದ್ದಾಗ ಅಲ್ಲಿಗೆ ಕನ್ನಡ ಕಲಿಯಲು ಬಂದಿದ್ದ ಸ್ಕಾಟ್‌ಲೆಂಡಿನ ಪಾದ್ರಿಯೊಬ್ಬರಿಗೆ ಪಾಠ ಹೇಳಿಕೊಡುವ ಪ್ರಸಂಗ ಒದಗಿತು. ಅದನ್ನು ಶಾಸ್ತ್ರಿಗಳ ಮಾತಿನಲ್ಲೇ ನಿರೂಪಿಸಿದ್ದೇನೆ.

"ಒಂದು ದಿನ ಸಾಹೇಬರ ಬಂಗಲೆಗೆ ಪಾಠ ಹೇಳಲು ಹೋಗುವಾಗ ನಾನು ಗಾಂಧಿ ಟೋಪಿ ಹಾಕಿಕೊಂಡು ಹೋದೆನು. ಆ ಪಾದ್ರಿಗೆ ಗಾಂಧಿ ಹೆಸರು ಕೇಳಿದರೆ ಆಗುತ್ತಿರಲಿಲ್ಲ. ಅವನು ಗಾಂಧಿ, ಇಂಗ್ಲೀಷರ ಶತ್ರು ಎಂದು ಹೇಳುತ್ತಿದ್ದನು. ಆಗ ಸಾಹೇಬರು ನನ್ನನ್ನು ನೋಡಿ ಇನ್ನು ಮೇಲೆ ನಮ್ಮ ಬಂಗಲೆಗೆ ಬರುವಾಗ ನಿಮ್ಮ ಟರ್ಬನ್ ಹಾಕಬೇಕು. ಗಾಂಧಿ ಟೋಪಿ ಹಾಕಬಾರದು. ಅವನು ಇಂಗ್ಲಿಷ್ ಜನರ ಶತ್ರು. ನಮ್ಮನ್ನು ಇಂಡಿಯಾ ದೇಶದಿಂದ ಓಡಿಸಬೇಕೆಂದು ಚಳವಳಿ ಮಾಡುತ್ತಿದ್ದಾನೆ. ನೀವು ಗಾಂಧಿ ಭಕ್ತರಾದರೆ ನಮ್ಮ ಸ್ಕೂಲಿನಿಂದ ವಜಾ ಮಾಡುತ್ತೇನೆ ಎಂದು ಹೇಳಿದನು. ಅದನ್ನು ಕೇಳಿ ನನ್ನ ಮನಸ್ಸಿಗೆ ತುಂಬ ನೋವುಂಟಾಯಿತು. ಗಾಂಧಿಯನ್ನು ದ್ವೇಷಿಸುವ ಇಂತಹ ಜನಗಳಲ್ಲಿ ನಾವು ನೌಕರಿ ಮಾಡಬಾರದು ಎಂದುಕೊಂಡು ಮಾರನೆಯ ದಿನವೇ ನನ್ನ ರಾಜೀನಾಮೆಯನ್ನು ಸಾಹೇಬರಿಗೆ ಒಪ್ಪಿಸಿದೆನು. ಆಗ ಅವರು ಪಾದ್ರಿ ಪರೀಕ್ಷೆಗೆ ಕಟ್ಟಿದರು. ಪರೀಕ್ಷೆಯಲ್ಲಿ ಉತ್ತೀರ್ಣ ನಾಗದಿದ್ದರೆ ಅವನನ್ನು ಸ್ವದೇಶಕ್ಕೆ ವಾಪಸ್ಸು ಕಳುಹಿಸುತ್ತಿದ್ದರು. ಆಗ ಸಾಹೇಬರು ಇನ್ನು ಸ್ವಲ್ಪ ಕಾಲ ಇರಬೇಕು. ನಿಮಗೆ ಇನ್ನೂ ಹೆಚ್ಚು ಸಂಬಳ ಕೊಡುತ್ತೇನೆ ಎಂದು ಹೇಳಿದರು. ನಾನು ಸಾಧ್ಯವಿಲ್ಲ. ನಾನು ಗಾಂಧೀ ವಿರೋಧಿಗಳಲ್ಲಿ ಕೆಲಸ ಮಾಡುವುದಿಲ್ಲ. ಗಾಂಧಿ ನಮ್ಮ ದೇಶದ ಉದ್ಧಾರಕರು. ನಿಮಗೆ ಏಸು ಸ್ವಾಮಿ ಹೇಗೋ ಹಾಗೆ ನಮಗೆ ಮಹಾತ್ಮಗಾಂಧಿ ದೊಡ್ಡವನು ಎಂದು ಹೇಳಿದೆನು. ಅಲ್ಲಿಂದ ಗುಬ್ಬಿವಾಸವನ್ನು ಬಿಟ್ಟು ತುಮಕೂರಿಗೆ ಹಿಂದಿರುಗಿದೆನು." (ಜೀವನ ಸ್ಮೃತಿಗಳು, ಪುಟ. ೩೪ - ೩೫)

## ೧೮. ಕೊನೆಯ ದಿನಗಳು

ನಿರಂತರ ಕಾಯಕ ಕಲಿಗಳಾದ ಶಾಸ್ತ್ರಿಗಳು ಸಂಸಾರವನ್ನು ಅಷ್ಟಾಗಿ ಹಚ್ಚಿಕೊಂಡಂತೆ ಕಂಡುಬರಲಿಲ್ಲ. ಕೀರ್ತನ, ಪ್ರವಚನ, ಭಾಷಣ, ಕರ್ಣಾಟಕ ಏಕೀಕರಣ ಕಾರ್ಯಗಳಲ್ಲಿ ಸಂಪೂರ್ಣವಾಗಿ ಮಗ್ನರಾದ ಶಾಸ್ತ್ರಿಗಳು ದೇಶ ಸಂಚಾರದಲ್ಲೇ ಬಹುಕಾಲವನ್ನು ಕಳೆದಿದ್ದಾರೆ. ಅವರು ಗುಬ್ಬಿಯಲ್ಲಿದ್ದಾಗಲೇ ಗುಬ್ಬಿಯವರೇ ಆದ ಅನ್ನಪೂರ್ಣಮ್ಮನವರೊಂದಿಗೆ ವಿವಾಹವಾಗಿತ್ತು. ಅವರಿಗೆ ಆರು ಗಂಡು ಮಕ್ಕಳೂ ಒಂದು ಹೆಣ್ಣು ಮಗುವೂ ಆಗಿತ್ತು. ಅವರಲ್ಲಿ ಉಳಿದುಕೊಂಡವರು ಒಬ್ಬರೇ. ಅವರೇ ಇಂದು ಸುಪ್ರಸಿದ್ಧ ವಕೀಲರಾಗಿರುವ ಎಚ್.ಎಸ್. ರೇಣುಕಾ ಪ್ರಸಾದ್. ಇವರ ಶ್ರೀಮತಿಯವರು ಕರ್ನಾಟಕ ಸರಕಾರದ ಕನ್ನಡ ಸಂಸ್ಕೃತಿ ಸಚಿವೆಯರಾದ ಶ್ರೀಮತಿ ಲೀಲಾದೇವಿ ಅವರು. ಮೊದಲನೆಯ ಹೆಂಡತಿ ತೀರಿಕೊಂಡ ಮೇಲೆ ಒಮ್ಮೆ ಶಾಸ್ತ್ರಿಗಳು ತಮಿಳುನಾಡಿಗೆ ಹೋಗಿದ್ದಾಗ ಮಧುರೈ ಜಿಲ್ಲೆಯ ಪೆರೈಯೂರಿನ ಮಠದ ಜಂಗಮರಾದ ಶ್ರೀವೀರಯ್ಯನವರ ಹಿರಿಯ ಮಗಳು ಮುದ್ದುವೀರಮ್ಮನವರನ್ನು ಮದುವೆಯಾದರು. ಇವರಿಗೆ ಆದದ್ದೂ ಒಬ್ಬನೇ ಮಗ. ಆತನೇ ಇಂದು ಸಾಹಿತ್ಯ ಕ್ಷೇತ್ರದಲ್ಲಿ ಹೆಸರುಗಳಿಸಿರುವ ಎಚ್.ಎಸ್. ಶಿವಪ್ರಕಾಶ್. ಶ್ರೀಮತಿ ಮುದ್ದುವೀರಮ್ಮನವರು ೩ - ೮ - ೭೧ರಲ್ಲಿ ಶಿವಾಧೀನರಾದರು. ಅಗಲಿದ ಮಡದಿಗಾಗಿ ಶಾಸ್ತ್ರಿಗಳು ೩೩ ಪದ್ಯಗಳ ಒಂದು ಶ್ರದ್ಧಾಂಜಲಿಯನ್ನು ಬರೆದಿದ್ದಾರೆ.

೧೯೭೨ರ ವೇಳೆಗೆ ಶಿವಮೂರ್ತಿ ಶಾಸ್ತ್ರಿಗಳಿಗೆ ಅನಾರೋಗ್ಯವುಂಟಾಯಿತು. ಅವರ ಎಲ್ಲ ಕಾರ್ಯಗಳೂ ಸ್ಥಗಿತಗೊಂಡವು. ಶರಣಸಾಹಿತ್ಯ ಮಾಸ ಪತ್ರಿಕೆಯನ್ನು ನಿಲ್ಲಿಸಿದ್ದೇ ಅಲ್ಲದೆ ನಷ್ಟದಲ್ಲಿದ್ದ ಮುದ್ರಣಾಲಯವನ್ನೂ ತಾವು ವಾಸವಾಗಿದ್ದ ಮನೆಯನ್ನೂ ಮಾರಿ ರಾಜಾಜಿನಗರದಲ್ಲಿ ಒಂದು ನಿವೇಶನವನ್ನು ಕೊಂಡು ಸಣ್ಣ ಮನೆಯನ್ನು ಕಟ್ಟಿ ವಾಸಿಸತೊಡಗಿದರು. ಈ ಪ್ರಕರಣವನ್ನು ಅವರೇ ಈ ರೀತಿ ಬರೆದಿಟ್ಟಿದ್ದಾರೆ.

## ೧೯. ಉಪಕಾರ ಸ್ಮರಣೆ

ಈಗ ನಾನು ಬೆಂಗಳೂರಿನ ರಾಜಾಜಿನಗರದಲ್ಲಿ 'ಶಿವಪ್ರಸಾದ' ಎಂಬ ಒಂದು ಆಶ್ರಮವನ್ನು ಸ್ಥಾಪನೆ ಮಾಡಿಕೊಂಡು ವಿಶ್ರಾಂತಿ ಜೀವನ ನಡೆಸುತ್ತಿದ್ದೇನೆ. ಹೀಗೆ ಮನುಷ್ಯರು ಪ್ರಾರಂಭಿಸಿದ ಕಾರ್ಯ ಎಂದಾದರೂ ಒಂದು ದಿನ ನಿಲ್ಲಬೇಕಾಗುತ್ತದಷ್ಟೆ? ಹುಟ್ಟಿದ ಸೂರ್ಯ ಮುಳುಗಲೇಬೇಕು. ಕಟ್ಟಿದ ಬುತ್ತಿಯು ತೀರಲೇಬೇಕು. ಪ್ರಯಾನ ಹೊರಟ ರೈಲುಗಾಡಿ ಎಲ್ಲಾದರು ಒಂದು ಕಡೆ

ನಿಲ್ಲಲೇಬೇಕು ಎಂಬ ವಿಧಿ ನಿಯಮದಂತೆ ೧೯೨೨ನೆಯ ವರ್ಷದಲ್ಲಿ ನಾವು ಪ್ರಾರಂಭಿಸಿದ ಸಾರ್ವಜನಿಕ ಸೇವಾಕಾರ್ಯವು ೫೦ ವರ್ಷಗಳ ಕಾಲ ಆಗಿ ೧೯೭೨ರಲ್ಲಿ ಮುಕ್ತಾಯಗೊಂಡಿದೆ. ಈ ಕಷ್ಟಕರವಾದ ಸಂದರ್ಭದಲ್ಲಿ ನನ್ನ ಜೀವನದ ಅಂತಿಮಘಟ್ಟದಲ್ಲಿ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಡಿ. ದೇವರಾಜ್ ಅರಸ್ ಮತ್ತು ಅವರ ಮಂತ್ರಿಮಂಡಲದವರು ಸರ್ಕಾರದಲ್ಲಿ ಉದಾರವಾಗಿ ತಿಂಗಳಿಗೆ ೫೦೦ ರೂಪಾಯಿ ವಿಶ್ರಾಂತಿ ವೇತನವನ್ನು ಕೊಟ್ಟು ನಾನು ನಿಶ್ಚಿಂತನಾಗಿ ಬಾಳಲು ನೆರವಾಗಿದ್ದಾರೆ. ಘನಸರ್ಕಾರದವರ ಉದಾರ ಉಪಕಾರಕ್ಕಾಗಿ ನಾನು ಅವರಿಗೆ ತುಂಬ ಕೃತಜ್ಞನಾಗಿದ್ದೇನೆ. (ಜೀವನ ಸ್ಮೃತಿಗಳು ಪುಟ. ೨೫)

ಸುಮಾರು ಐವತ್ತು ವರ್ಷಗಳ ಕಾಲ ಕನ್ನಡ ನಾಡು ನುಡಿಗಳಿಗೆ ಚಿರಸ್ಮರಣೀಯವಾದ ಸೇವೆಯನ್ನು ಸಲ್ಲಿಸಿದ ಶಿವಮೂರ್ತಿಶಾಸ್ತ್ರಿಗಳು ಅನಾರೋಗ್ಯಕ್ಕೆ ಒಳಗಾಗಿ ದಿನಾಂಕ ೧೫ - ೧ - ೧೯೭೬ರಂದು ಶಿವಾಧೀನರಾದುದು ವಿಧಿವಿಲಾಸವೆಂದೇ ಹೇಳಬೇಕಾಗಿದೆ. ಅವರು ಕಣ್ಮರೆಯಾದರೂ ಅವರು ಮಾಡಿದ ಕಾರ್ಯಗಳು ಕನ್ನಡಿಗರ ಕಣ್ಮುಂದೆ ನಿರಂತರವಾಗಿ ತೊಳಗುತ್ತಿವೆ. ಅಖಂಡ ಕರ್ಣಾಟಕದ ಕಣ್ಮಣಿಯಾಗಿ ತೊಳಗಿ ಬೆಳಗಿದ ಶಿವಮೂರ್ತಿ ಶಾಸ್ತ್ರಿಗಳು ಶಾಶ್ವತ ಧ್ರುವತಾರೆಯಂತಿದ್ದಾರೆ.

**೧೦. ಸಮಾರೋಪ**

ಶಿವಮೂರ್ತಿ ಶಾಸ್ತ್ರಿಗಳು ಸಾಹಿತ್ಯ ಅಕಾಡೆಮಿ, ನಾಟಕ ಅಕಾಡೆಮಿ, ಕನ್ನಡ ನಿಘಂಟು ಸಂಪಾದಕ ಸಮಿತಿ, ಕನ್ನಡ ವಿಶ್ವಕೋಶ ಸಮಿತಿ, ಆಕಾಶವಾಣಿ ಸಲಹಾಸಮಿತಿ, ಬಸವ ಸಮಿತಿ ಕಾರ್ಯಸಮಿತಿ, ಅಖಿಲ ಭಾರತ ವೀರಶೈವ ಮಹಾಸಭೆಯ ಕಾರ್ಯಸಮಿತಿ, ಲಿಂಗಾಯತ ಅಭಿವೃದ್ಧಿ ಸಮಿತಿ, ಮೈಸೂರು ಮುದ್ರಣಕಾರರ ಸಹಕಾರ ಸಂಘ, ಮೈಸೂರು ಸರ್ಕಾರದ ಗಡಿ ಸಲಹಾ ಸಮಿತಿ - ಇವೇ ಮೊದಲಾದ ಹಲವಾರು ಸಂಘ ಸಮಿತಿಗಳ ಸದಸ್ಯರಾಗಿ ಗಣನೀಯ ಸೇವೆಯನ್ನು ಸಲ್ಲಿಸಿದ್ದಾರೆ.

ಕರ್ಣಾಟಕದ ಶ್ರೇಷ್ಠ ವಿದ್ವಾಂಸರೂ, ಜಂಗಮ ವಿಶ್ವಕೋಶ ಎಂಬ ಅಭಿಧಾನಕ್ಕೆ ಪಾತ್ರರೂ ಆದ ಡಾ. ಡಿ.ಎಲ್. ನರಸಿಂಹಾಚಾರ್ಯರ ಮಾತುಗಳು "ಸ್ಥಿರ ಸಂಕಲ್ಪಯುತನಾದ ಒಬ್ಬ ಮನುಷ್ಯನು ನಿರಂತರ ಉದ್ಯೋಗ ಶೀಲತೆಯಿಂದಲೂ ಪ್ರಯತ್ನದಿಂದಲೂ ಆತ್ಮೋದ್ಧಾರವನ್ನು ಮಾಡಿಕೊಂಡು, ಜನತೆಯ ಉದ್ಧಾರವನ್ನು ಹೇಗೆ ಮಾಡಲು ಸಾಧ್ಯವೆಂಬುದಕ್ಕೆ ಶ್ರೀಮಾನ್ ಶಾಸ್ತ್ರಿಗಳ ಜೀವನ ಒಂದು ನಿಚ್ಚಳವಾದ ಜೀವಂತವಾದ ನಿದರ್ಶನವಾಗಿದೆ.

ಕನ್ನಡದಲ್ಲಿರುವ ವೀರಶೈವ ಸಾಹಿತ್ಯವನ್ನು ಶ್ರೀಮಾನ್ ಶಾಸ್ತ್ರಿಗಳು ಐತಿಹಾಸಿಕ ದೃಷ್ಟಿಯಿಂದಲೂ ವಿಮರ್ಶಾತ್ಮಕ ದೃಷ್ಟಿಯಿಂದಲೂ ಅಭ್ಯಾಸ ಮಾಡಿದ್ದಾರೆ. ಹಲವು ಹೊಸ ವಿಷಯಗಳನ್ನು ಹೊರಗೆಡವಿದ್ದಾರೆ. ತಮ್ಮ ನಿರೂಪಣೆಯ ಪರಿಪೂರ್ಣತೆಯ ದೃಷ್ಟಿಯಿಂದ ಅವರು ಸಂಸ್ಕೃತ, ತೆಲುಗು, ತಮಿಳು ಭಾಷೆಗಳಲ್ಲಿರುವ ವೀರಶೈವ ಸಾಹಿತ್ಯದ ಗ್ರಂಥಗಳನ್ನು ವ್ಯಾಸಂಗಮಾಡಿ ಅವುಗಳಿಂದ ನೆರವು ಪಡೆದಿದ್ದಾರೆ. ವೀರಶೈವ ಸಾಹಿತ್ಯವನ್ನು ಕುರಿತಾದ ಅವರ ಜ್ಞಾನವು ಯಾವ ಉತ್ಕೃಷ್ಟ ಕನ್ನಡ ಸಾಹಿತ್ಯ ಪರೀಕ್ಷೆಯಲ್ಲಿ ತೇರ್ಗಡೆಯಾದ ಸ್ನಾತಕೋತ್ತರ ವಿದ್ಯಾರ್ಥಿಯ ಜ್ಞಾನಕ್ಕಿಂತ ಅತಿಶಯವಾಗಿದೆ. ಸ್ವಂತ ಪರಿಶ್ರಮದಿಂದ ಇಷ್ಟನ್ನೆಲ್ಲಾ ಅವರು ಹೇಗೆ ಕಲಿತರೆಂದು ಅಚ್ಚರಿ ಪಡಬೇಕಾಗಿದೆ." (ಜೀವನ ಸ್ಮೃತಿಗಳು, ಪುಟ. ೩೮ - ೪೦)

ಕಾದಂಬರಿ ಸಾರ್ವಭೌಮರಾದ ಅ.ನ. ಕೃಷ್ಣರಾವ್ "ಧೃಢಸಂಕಲ್ಪ ಅದನ್ನು ಕಾರ್ಯರೂಪಕ್ಕೆ ತರುವ ನಿಶ್ಚಲತೆ ಎರಡೂ ಮೂಡಿದ ಪಕ್ಷದಲ್ಲಿ ವ್ಯಕ್ತಿ ಏನನ್ನು ಸಾಧಿಸ ಬಹುದೆನ್ನುವುದಕ್ಕೆ ಬಿ. ಶಿವಮೂರ್ತಿಶಾಸ್ತ್ರಿಗಳ ಜೀವನ ಕೃತಿ ಯೋಗ್ಯ ನಿದರ್ಶನವಾಗಿದೆ.

ಶಾಸ್ತ್ರಿಗಳ ವ್ಯಕ್ತಿತ್ವ ಅಸಾಮಾನ್ಯವಾದುದು. ಕಲ್ಲಿನಿಂದ ನೀರು ತೆಗೆಯಬಲ್ಲರು, ಒಣಗಿದ ಕಾಷ್ಠದಲ್ಲಿ ಹೂ ಅರಳಿಸಬಲ್ಲರು. ಕನ್ನಡ ನಾಡಿನಲ್ಲಿ ಅವರು ಹೋಗದ ಸ್ಥಳವಿಲ್ಲ, ಕಾಣದ ವ್ಯಕ್ತಿಯಿಲ್ಲ. ಸಹಾಯ ಕೋರಿದವರಿಗೆ ಇಲ್ಲವೆನ್ನುವುದು ಶಾಸ್ತ್ರಿಗಳ ಜಾಯಮಾನಕ್ಕೆ ಬಂದಿಲ್ಲ. ಅನೇಕ ಸಲ ತಮ್ಮ ಮಹತ್ವದ ಕೆಲಸಗಳನ್ನು ಬದಿಗೊತ್ತಿ ಕಂಡವರ ಕೆಲಸಕ್ಕೆ ತೊಡಗುತ್ತಾರೆ. ಪರಸೇವೆಗೆ ತೊಡಗಿದಾಗ ತಮಗಾದ ಕಷ್ಟನಷ್ಟಗಳನ್ನು ಸಂತೋಷದಿಂದ ಸಹಿಸಿಕೊಳ್ಳುತ್ತಾರೆ. (ಕನ್ನಡ ಕುಲರಸಿಕರು)

**ಗದಗಿನ ತೋಂಟದಾರ್ಯ ಸಿದ್ಧಲಿಂಗ ಮಹಾಸ್ವಾಮಿಗಳು :**ಆಸ್ಥಾನ ವಿದ್ವಾನ್ ಪಂಡಿತರತ್ನಂ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳವರದು ಹನಿಯಾಗಿ ತಲೆದೋರಿ ಹೊಳೆ ಹಳ್ಳವಾಗಿ ಹರಿದ ಜೀವನ. ಶಾಲಾ ಶಿಕ್ಷಕ, ಕೀರ್ತನಕಾರ, ಆಸ್ಥಾನವಿದ್ವಾನ್, ನಾಡನಾಯಕ - ಇವು ಶ್ರೀ ಶಾಸ್ತ್ರಿಗಳ ಸಾಧನೆಯ ಸೋಪಾನಗಳು. ಮಹಾಭಾರತದಲ್ಲಿ ಭೀಮ ಗದೆಯಾಡದ ಸ್ಥಳವಿಲ್ಲವೆಂಬಂತೆ ಭೀಮಕಾಯದ ಭೀಮಸಾಹಸದ ಶ್ರೀಶಾಸ್ತ್ರಿಗಳು ಕರ್ನಾಟಕದಲ್ಲಿ ಸಂಚರಿಸದ ಹಳ್ಳಿ ಪಟ್ಟಣಗಳಿಲ್ಲ, ಹಾದಿಬೀದಿಗಳಿಲ್ಲ. ಹೀಗೆ ನಾಡಿನುದ್ದಕ್ಕೂ ನಡೆದು ಮಾತು ಕೃತಿಗಳ ಮೂಲಕ ನಾಡವರನ್ನು ಎಚ್ಚರಿಸಿದ ಸೂರ್ಯಸಮನ್ವಯ ವ್ಯಕ್ತಿತ್ವ ಶ್ರೀ ಶಾಸ್ತ್ರಿಗಳದು."

**ಆಸ್ಥಾನ ವಿದ್ವಾನ್, ಪಂಡಿತ ರತ್ನಂ ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರೀ ಅವರಿಂದ ರಚಿತವಾಗಿರುವ ಗ್ರಂಥಗಳು**

೧. ವೀರಶೈವ ಸಾಹಿತ್ಯ ಮತ್ತು ಇತಿಹಾಸ. (ಭಾಗ ೧,೨,೩)
೨. ಕರ್ನಾಟಕ ಸಂದರ್ಶನ
೩. ದುಂಬಿ ಮತ್ತು ನಾದ (ಕವನ ಸಂಗ್ರಹ)
೪. ವೀರಶೈವ ಮಹಾಪುರುಷರು (ಅರುವತ್ತು ಜೀವನ ಚರಿತ್ರೆಗಳು)
೫. ಶ್ರೀ ಮಾದೇಶ್ವರ ಚರಿತೆ. (ಸಂತರ ಜೀವನ ಚರಿತೆ)
೬. ಮಹಾಕವಿ ಷಡಕ್ಷರ ದೇವ (ಕವಿ, ಕಾವ್ಯ, ವಿಮರ್ಶೆ)
೭. ಬಿದನೂರ ಪ್ರಭು ಶಿವಪ್ಪನಾಯಕ ಮತ್ತು ಮಲೆನಾಡಿನ ಮೂರು ರಾಜ್ಯಗಳು
೮. ಸರ್ವಜ್ಞ ಮೂರ್ತಿ (ಕವಿ ಕಾವ್ಯ ವಿಮರ್ಶೆ)
೯. ಮಹಾತ್ಮ ಕನಕದಾಸ (ಕವಿ, ಕಾವ್ಯ, ವಿಮರ್ಶೆ)
೧೦. ಮಹಾಕವಿ ಲಕ್ಷ್ಮೀಶ (ಕವಿ, ಕಾವ್ಯ, ವಿಮರ್ಶೆ)
೧೧. ಕರ್ಣಾಟಕ ವಿಜಯ (ನಾಟಕ)
೧೨. ಕೆಳದಿ ರಾಣಿ ಚೆನ್ನಮ್ಮಾಜಿ (ನಾಟಕ)
೧೩. ಆಕಾಶವಾಣಿಯ ಶಬ್ದ ಚಿತ್ರಗಳು
೧೪. ಶರಣ ಚರಿತ ಮಾನಸ (೧೫೫ ಕಂದ ಪದ್ಯಗಳು)
೧೫. ಹರಿಹರ ಮತ್ತು ರಾಘವಾಂಕ (ಕವಿ, ಕಾವ್ಯ, ವಿಮರ್ಶೆ)
೧೬. 'ದೀನ ಬಂಧು' ಕೈ|| ಎಚ್. ಸಿದ್ಧಯ್ಯನವರು
೧೭. ನೀಲಗಿರಿ ಜಿಲ್ಲೆ ಮತ್ತು ಮೈಸೂರಿನ ಬಾಂಧವ್ಯ
೧೮. ಗಾಂಧೀ ಗೀತೆಗಳು
೧೯. ನಾಲ್ವಡಿ ಕೃಷ್ಣರಾಜ ವಿಳಾಸ (ಚಂಪು)
೨೦. ಗಾಂಧಿ ಮಹಾತ್ಮರ ತತ್ವಬೋಧೆ
೨೧. ನನ್ನ ತಾಯಿ ನುಡಿ
೨೨. ವೀರಶೈವ ವಾಙ್ಮಯ ವಿಸ್ತಾರ
೨೩. ಯುಗವಾಣಿ (ಕವನ ಸಂಗ್ರಹ)
೨೪. ಗಮಕ ಕಾವ್ಯ ಮಂಜರಿ
೨೫. ಶಿವಶರಣರ ತ್ರಿಪದಿಗಳು ಮತ್ತು ವೇದಾಂತ ಶಿಬಾರತ್ನ ಪ್ರಕಾಶಿಕಾ
೨೬. ವೀರಶೈವ ಧರ್ಮ ಸಂಸ್ಕೃತಿ
೨೭. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ
೨೮. ಸರ್ವಜ್ಞ ವಚನ ಸಂಗ್ರಹ

**ಶ್ರೀ ಬಿ. ಶಿವಮೂರ್ತಿಶಾಸ್ತ್ರೀಯವರು ಸಂಪಾದಿಸಿ ಪ್ರಕಟಿಸಿರುವ ಗ್ರಂಥಗಳು**

೧. ಪುರಾತನರ ತ್ರಿವಿಧಿ - ನಿಜಗುಣ ಶಿವಯೋಗಿ

೨. ವೀರೇಶ ಚರಿತೆ - ಮಹಾಕವಿ ರಾಘವಾಂಕ

೩. ಬಸವೋದಾಹರಣಂ (ಸಂಸ್ಕೃತ) - ಪಾಲ್ಕುರಿಕ ಸೋಮನಾಥ

೪. ಘನಲಿಂಗಿದೇವರ ವಚನಗಳು - ಘನಲಿಂಗಿದೇವ

೫. ತುರುಗಾಹಿ ರಾಮಣ್ಣನವರ ವಚನಗಳು - ತುರುಗಾಹಿ ರಾಮಣ್ಣ

೬. ನ್ಯಾಯ ಶತಕ ಸಂಸ್ಕೃತ - ರಾಮೇಶ್ವರಮುಖಿ (ಶಿರಸಿ ಗುರುಶಾಂತಶಾಸ್ತ್ರಿ)

೭. ಕನ್ನಡಕಲಿ ಸಿರುಮನ ಚರಿತೆ - (ದಿ. ಹು. ಶ್ರೀ. ಜೋಯಿಸರು)

೮. ಕನ್ನಡ ಆದಿತ್ಯ ಪುರಾಣ (ಭಾಗ ೧) (ದಿ. ವೆಂಕಟರಾಮಾಚಾರ್ಯ)

೯. ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ (ಭಾಗ ೧) ಶಾಂತಲಿಂಗದೇಶಿಕ (ಎನ್. ಬಸವಾರಾಧ್ಯ)

೧೦. ಗಣಸಹಸ್ರನಾಮಾವಳಿ - ಪಾಲ್ಕುರಿಕ ಸೋಮನಾಥ

೧೧. ಷಡಕ್ಷರ ಮಂತ್ರ ಮಹಿಮೆ - ಕೊಂಡಗುಳಿ ಕೇಶಿರಾಜ

೧೨. ಮಾದೇಶ್ವರ ಸಾಂಗತ್ಯ - ಗುರುಸಿದ್ಧ ಕವಿ

೧೩. ಪಂಪಾಸ್ಥಾನ ವರ್ಣನೆ - (ಚಂಪು) ಅಷ್ಟಭಾಷಾ ಕವಿ ಚಂದ್ರಶೇಖರ. (ಎಸ್.ಎನ್. ಕೃಷ್ಣಜೋಯಿಸ್)

೧೪. ಕನ್ನಡ ಶತಕ ಸಾಹಿತ್ಯ. (ಐವರು ಪ್ರಾಚೀನ ಕವಿಗಳು)

೧೫. ಬಸವಲಿಂಗ ನಾಮಾವಳಿ

೧೬. ಶರಣ ಬಸವ ರಗಳೆ - ಪಾಲ್ಕುರಿಕೆ ಸೋಮನಾಥ

೧೭. ಸಂಕ್ಷಿಪ್ತ ಶಿವಪೂಜಾವಿಧಿ. (ಚೌಡದಾನಪುರದ ವಿರೂಪಾಕ್ಷ ಒಡೆಯರು)

**ಶ್ರೀ ಬಿ. ಶಿವಮೂರ್ತಿಶಾಸ್ತ್ರಿ ಅವರಿಂದ ಬರೆಯಲ್ಪಟ್ಟ ಲೇಖನಗಳು (ಗ್ರಂಥಸ್ಥವಲ್ಲದ)**

೧. ಜೈನಧರ್ಮ ಮತ್ತು ಮಹಾವೀರಸ್ವಾಮಿ. (ಶ.ಸಾ.೨೮.೧)

೨. ಕನ್ನಡದ ಉದ್ಧಾರಕರು (" ೨೯.೧೬)

೩. ಹರಿಭಕ್ತಿ ಸಾರ (" ")

೪. ವಚನ ವಾಙ್ಮಯದಲ್ಲಿ ಕಾವ್ಯಗುಣ (" ೨೮.೪)

೫. ಶಿವಯೋಗಿ ಸರ್ಪಭೂಷಣರು (" ")

೬. ಸರ್ವಜ್ಞ ವಚನಗಳು (" ೨೮.೫)

೭. ಹರಿಹರ - ರಾಘವಾಂಕರು ಸ್ಮರಿಸಿರುವ ಪೂರ್ವ ಕವಿಗಳು. (ಸಾ.ಪ. ೧೯೬೪) ಮತ್ತು (ಶ.ಸಾ ೨೧.೧)

೮. ಮೃತ್ಯುಂಜಯ ಶಿವಯೋಗಿಗಳು (" ೨೮.೭)

೯. ಕನ್ನಡ ಜಾಣ್ಣುಡಿಗಳು (" ೨೮.೮)

೧೦. ಪಿ.ಆರ್. ಕರಿಬಸವಶಾಸ್ತ್ರಿಗಳು ಮತ್ತು ಗಂಗಾಧರ ಮಡಿವಾಳೇಶ್ವರ (" ೨೮.೮)

೧೧. ಕನ್ನಡ ಶಬ್ದ ವಿಜ್ಞಾನ (" ೩೦.೬) (" ೨೭.೯) (ಶ.ಸಾ ೨೯ - ೪೦೯ - ೬)

೧೨. ದೇಶಭಕ್ತ ಮಂಜಪ್ಪ ಹರ್ಡೇಕರ್ (" ೨೮ - ೧೧, ೧೨)

೧೩. ಜಗನ್ನಾಯಿಕಂ ವಾ ಪ್ರಸಾದಿಕಂ, (ಸಂಸ್ಕೃತ.) (" ")

೧೪. ಹಿಂದೂ ಸಂಘಟನೆಗೆ ಬಸವಣ್ಣನವರು ತೋರಿದ ದಾರಿ. ('ವಿಕ್ರಮ' ವಿಜಯದಶಮಿ) ೧೯೬೭

೧೫. ವೇದಾಂತ ಮತ್ತು ವಿಜ್ಞಾನ (ಶ.ಸಾ. ೨೭.೧)

೧೬. ವೀರಶೈವ ಧರ್ಮ ಮತ್ತು ಶ್ರೀ ಶೈಲ ಕ್ಷೇತ್ರ (ಶ್ರೀ ಶೈಲಸಂಚಿಕೆ ೧೯೯೪)

೧೭. ಡಾ. ಫ.ಗು. ಹಳಕಟ್ಟಿ (ಶ.ಸಾ ೨೭.೨,೩)

೧೮. ಕನಕದಾಸರ ನಾಣ್ಣುಡಿಗಳು (" ೨೭ - ೧೦)

೧೯. ಗೋವೆಯಲ್ಲಿ ನನ್ನ ಅನುಭವಗಳು (" ")

೨೦. ಕೊಂಕಣಿ ಶಬ್ದ ಸಂಪತ್ತು. (" ")

೨೧. ಹಿಂದೀ ವಿರೋಧ ಸಲ್ಲದು. (ಶ.ಸಾ. ೨೭.೧೦)

೨೨. ಮಹಾತ್ಮ ಕನಕದಾಸರು (" ೨೭ - ೧೨)

೨೩. ವೀರಶೈವ ಧರ್ಮ (" ೨೫.೨,೩)

೨೪. ಕೈ|| ಪಿ. ಮಹಾದೇವಯ್ಯನವರು (" ")

೨೫. ಕೈ|| ಡಿ.ಎಸ್. ಮಲ್ಲಪ್ಪನವರು (" ೨೯.೪)

೨೬. ಕೆಲವು ಐತಿಹಾಸಿಕ ಸ್ಥಳಗಳು. (" ")

೨೭. ಹರಿಭಕ್ತಿಸಾರದ ಕಥೆಗಳು (" ೨೯.೫)

೨೮. ಮುಪ್ಪಿನ ಷಡಕ್ಷರ ಸ್ವಾಮಿಗಳು. (" ೨೯ - ೭)

೨೯. ಕನ್ನಡಿಗರ ಇಂದಿನ ಅಗತ್ಯಗಳು (" ೨೯ - ೮)

೩೦. ಕೊಡಗರ ಇಂದಿನ ಅಗತ್ಯಗಳು. (" ")

೩೧. ಹರಿಹರನ ರಗಳೆಗಳು (" ")

೩೨. ಕರ್ನಾಟಕಕ್ಕಾಗಿ ದುಡಿದ ಸುಪ್ರತಿಷ್ಠರು (ಪ್ರಜಾವಾಣಿ ೧೯೬೬) (ಶ.ಸಾ. ೨೯ - ೬)

೩೩. ಶಿವಶರಣರ ಚರಿತ್ರೆಗಳು ಮತ್ತು ಭಾರತದಲ್ಲಿ ವೀರಶೈವರ ಕುರುಹುಗಳು. (ಶ.ಸಾ. ೨೯.೧೦)

೩೪. ಶಿವಶರಣರ ತತ್ವಗಳೂ ಭಾರತದ ರಾಜ್ಯಾಂಗವೂ (" ೨೯.೧೧) (ಗೋವೆಯ ಕನ್ನಡ ಸಂಘದ ಪ್ರಕಟಣೆ ೧೯೬೭) (ಶ.ಸಾ. ೨೯ - ೧೧, ೧೨.)

೩೫. ಕನ್ನಡ ನಾಡು ಶರಣರ ಬೀಡು, 'ತರಳಬಾಳು ಜಗದ್ಗುರು ವಿಶೇಷ ಸಂಚಿಕೆ' ೧೯೬೬

೩೬. ಕೊಂಡಗುಳಿ ಕೇಶಿರಾಜನ ಕಾಲವಿಚಾರ

೩೭. ಅಮರಗೊಂಡದ ಮಲ್ಲಿಕಾರ್ಜುನ. (ಶ.ಸಾ ೩೦ - ೧)

೩೮. ಬಿಜ್ಜ ಮಹಾದೇವಿ

೩೯. ಆಚಾರ್ಯ ರೇವಣಸಿದ್ಧ ಮತ್ತು ರುದ್ರಮುನಿಗಳು (ಶ.ಸಾ ೩೯ - ೧೧, ೧೨.)

೪೦. ವಚನ ಶಾಸ್ತ್ರದ ಉದ್ಧಾರಕರು

೧. ಆಚಾರ್ಯ ಮರುಳಸಿದ್ಧ

೨. ಪಂಡಿತಾಚಾರ್ಯ (ಶ.ಸಾ ೩೦.೩)

೪೧. ಆಚಾರ್ಯ ಏಕೋರಾಮ ( - ಏಕಾಂತರಾಮ)

೪೨. ಕೈ|| ಬಸವನಾಳರು ಸ್ಮಾರಕ ಸಂಚಿಕೆ

೪೩. ಭಾರತೀಯ ಸಂಸ್ಕೃತಿ - ಸರಕಾರದ ಪ್ರಕಟಣೆ

೪೪. ಕವಿ ಪುಲಿಗೆರೆಯ ಸೋಮ (ಶ.ಸಾ)

೪೫. ಸಪ್ತ ಕಾವ್ಯದ ಗುರುಬಸವ (ಶ.ಸಾ ೩೦.೬.೭.)

೪೬. ಶ್ರೀ ನಿಜಗುಣ ಶಿವಯೋಗಿ ('ಸ್ವರೂಪ ದರ್ಶನ'ದ ೧೯೫೪)

೪೭. ಬಿಳಗಿ ರಾಜರ ಚರಿತ್ರೆ (ಶಿವಾನುಭವ)

೪೮. ಕೆಳದಿ ರಾಜರ ಚರಿತ್ರೆ (ಶಿವಾನುಭವ)

೪೯. ವೀರಶೈವ ಮಠಗಳು (ಜ.ಕ.)

೫೦. "ರಾಮಾಯಣದ ವಾನರರು ಕಪಿಗಳಲ್ಲ ಕನ್ನಡಿಗರು" (ಕರ್ಮವೀರ) ಸಂಯುಕ್ತ ವಿಶೇಷ ಸಂಚಿಕೆ. 'ಭರತ ಭಕ್ತಿ ಕಾವ್ಯ' ಪೀಠಿಕೆ

೫೧. ಬಿಳಗಿಯ ಶಾಸನಗಳು. (ಶ.ಸಾ.)

೫೨. ಕೈ|| ಸರ್. ಸಿದ್ಧಪ್ಪ ಕಂಬಳಿ, ಕೈ ಎಚ್. ಸಿದ್ಧಯ್ಯನವರು

೫೩. ವಿಜಯನಗರ ಸಾಮ್ರಾಜ್ಯದಿಂದ ವೀರಶೈವರಿಗೆ ಆದ ಸಹಾಯ

೫೪. ಕನ್ನಡ ಸಾಹಿತ್ಯದ ಸಿಂಹಾವಲೋಕನ

೫೫. ವೀರಶೈವರ ಸಮನ್ವಯ ದೃಷ್ಟಿ

೫೬. ದಯಾ - ಧರ್ಮ ಪ್ರಧಾನ ಮತ

೫೭. ವೀರಶೈವ ಮತ್ತು ಸನಾತನ ಧರ್ಮ

೫೮. ಧರ್ಮಸ್ಥಳದಲ್ಲಿ ಭಾಷಣಗಳು ಮತ್ತು ವಿಶೇಷ ಸಂಚಿಕೆ ಲೇಖನಗಳು.

೫೯. ಬೊಂಬಾಯಿ, ಮದರಾಸು ಹೊಸದೆಹಲಿ, ಬೆನಾರಸ್ ಮತ್ತು ಹೈದರಾಬಾದು ಕರ್ಣಾಟಕ ಸಂಘಗಳಲ್ಲಿ ಭಾಷಣಗಳು

೬೦. ಅನುಭವ ಮಂಟಪ, (ಶ.ಸಾ.)

೬೧. ಪೊಟ್ಟಲಗೆರೆ ಶಾಸನ, (ಶ.ಸಾ.)

೬೨. ನಿಜಗುಣ ಶಿವಯೋಗಿ ಶಬ್ದಚಿತ್ರ. "

೬೩. ಹರಿಶ್ಚಂದ್ರ ಕಾವ್ಯ ಸಂಗ್ರಹ "

೬೪. ಬಸವೇಶ್ವರ ಶಬ್ದಚಿತ್ರ. "

೬೫. ಶಿವಶರಣೆಯರು ಶಬ್ದಚಿತ್ರ "

೬೬. ಸರ್ಪಭೂಷಣ ಶಿವಯೋಗಿ "

೬೭. ಅಮರಗೊಂಡ - ಗುಬ್ಬಿ. "

**ಸರ್ಕಾರದ ಪರವಾಗಿ ಸಂಪಾದಿಸಿದ ಗ್ರಂಥಗಳು**

೧. ಕನ್ನಡ ಜೈಮಿನಿ ಭಾರತ. (ದಿವಂಗತ ದೇವಡು ಅವರೊಡನೆ)

೨. ಕನಕದಾಸರ ಕೀರ್ತನೆಗಳು. (ಡಾ. ಕೆ.ಎಂ. ಕೃಷ್ಣರಾವ್ ಅವರೊಡನೆ)

೩. ಹರಿಭಕ್ತಿಸಾರ. (ಡಾ. ಕೆ.ಎಂ. ಕೃಷ್ಣರಾವ್ ಅವರೊಡನೆ)

**ಸಾಹಿತ್ಯ ಪರಿಷತ್ತಿನಲ್ಲಿ ಸಂಪಾದಿಸಿ ಪ್ರಕಟಿಸಿದ ಗ್ರಂಥಗಳು**

೧. ಕರ್ಣಾಟಕ ಕವಿಚರಿತ್ರೆ (ಭಾಗ I.) ಪ್ರೊ. ಡಿ.ಎಲ್. ನರಸಿಂಹಾಚಾರ್ ಶ್ರೀ. ಕಾ. ಸ. ಧರಣೇಂದ್ರಯ್ಯ, ಶ್ರೀ. ಜಿ. ವೆಂಕಟಸುಬ್ಬಯ್ಯ ಅವರೊಂದಿಗೆ

೨. ಗಮಕ ಕಾವ್ಯ ಮಂಜರಿ.

೩. ಸೋಮೇಶ್ವರ ಶತಕ - ಪ್ರಸ್ತಾವನೆ

**ಶ್ರೀ ಬಿ. ಶಿವಮೂರ್ತಿಶಾಸ್ತ್ರಿ ಅವರಿಂದ ರಚಿತವಾದ ಕವನಗಳು**

ನೀಲಗಿರಿ ಶಿಖರದಲ್ಲಿ (ಗಮಕ ಕಾವ್ಯಮಂಜರಿ ಪರಿಷತ್ತಿನ ಪ್ರಕಟನೆ)

೧. ಕರುಣೆಯ ನಿಧಿ (ಶ.ಸಾ ೨೮ - ೭)

೨. ಜಯವಿಭವ ಜಗದ್ಗುರು (" ೨೭ - ೧)

೩. ಇನ್ನಿಲ್ಲ ಜವಹರನು (" ೨೭ - ೪)

೪. ಮಂಗಳ ಗೀತೆಗಳು (" ೨೭ - ೭)

೫. ಹಿಮಗಿರಿಯ ಶಿಖರದಲಿ (ವೀರ ಗೀತೆಗಳು)

೬. ಓ ಅಜಂತದ ಗವಿಯೇ (ಸರ್ಕಾರಿ ಪಠ್ಯಪುಸ್ತಕ)

೭. ಇಮ್ಮಡಿ ಪುಲಿಕೇಶಿ (ಹೈಸ್ಕೂಲ್ IIನೇ ತರಗತಿ ಪಠ್ಯ ಪುಸ್ತಕ)